
ಸುಕ್ರಿಬೊಮ್ಮಗೌಡ



ಶಾಂತಿ ನಾಯಕ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೬೭

ನಾಡೋಜ

ಸುಕ್ರಿಬೊಮ್ಮಗೌಡ

ವ್ಯಕ್ತಿ ಪರಿಚಯ

ಶಾಂತಿ ನಾಯಕ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

Sukri Bomma Gowda- A Pen Portrait- By **Shanthi Nayaka**
Published by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 27201143.

ಪ್ರಥಮ ಮುದ್ರಣ : ೨೦೧೧ ಪುಟಗಳು : ೪೦

ಪ್ರತಿಗಳು : ೧೦೦೦

ಬೆಲೆ : ರೂ. ೧೫ (ಹದಿನೈದು ರೂಪಾಯಿ)

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು– ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಲೇಖಕರಾದ **ಶಾಂತಿ ನಾಯಕ** ಅವರು **ಸುಕ್ರಿ ಬೊಮ್ಮ ಗೌಡ** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧–೫–೨೦೧೧

ಸುಕ್ರಿ ಬೊಮ್ಮಗೌಡ

ಆಧುನಿಕ ಸಮಾಜ ಶಾಸ್ತ್ರಜ್ಞರು ಗುರುತಿಸಿರುವಂತಹ ಬುಡಕಟ್ಟು ಸಂಸ್ಕೃತಿಯ ಬಹುಪಾಲು ಲಕ್ಷಣಗಳನ್ನು ಇಂದಿನವರೆಗೂ ಉಳಿಸಿಕೊಂಡು ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲಾ, ಕುಮಟಾ, ಹೊನ್ನಾವರ ತಾಲ್ಲೂಕುಗಳಲ್ಲಿ ನೆಲೆಸಿರುವ ಒಂದು ಜನಸಮುದಾಯವನ್ನು ಸ್ಥಳೀಯವಾಗಿ ಹಾಲಕ್ಕಿ ಒಕ್ಕಲು ಎಂದು ಗುರುತಿಸಲಾಗುತ್ತದೆ. ಈ **ಹಾಲಕ್ಕಿ ಒಕ್ಕಲ** ಮೂಲಸ್ಥಾನ ಯಾವುದು ಎಂಬ ಬಗ್ಗೆ ಖಚಿತ ಮಾಹಿತಿ ದೊರಕುವುದಿಲ್ಲವಾದರೂ ಇವರು ದಕ್ಷಿಣ ಕರ್ನಾಟಕದಿಂದ ಬಹುಶಃ ಕೊಡಗಿನ ಹತ್ತಿರದ ಪ್ರದೇಶದಿಂದ ಇತ್ತ ಬಂದಿರಬಹುದೆಂಬ ಊಹೆಗೆ ಅನೇಕ ಆಧಾರಗಳು ದೊರೆಯುತ್ತವೆ. ಹಾಲಕ್ಕಿ ಒಕ್ಕಲು ಭಾರತದ ದಕ್ಷಿಣದ ಕಡೆಯಿಂದ ಸಮುದ್ರ ಮಾರ್ಗವಾಗಿ ಉತ್ತರ ಕನ್ನಡ ಜಿಲ್ಲೆಗೆ ಬಂದರೆಂಬ ಜಾನಪದ ವಿದ್ವಾಸರ ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದು. ಇವರ ಮೂಲವನ್ನು ಗುರುತಿಸಲು ಈ ಕಿರು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವ ಆಧಾರಗಳೆಂದರೆ ಹಾಲಕ್ಕಿ ಒಕ್ಕಲ ಜಾತಿಯ ಹೆಸರಿನಲ್ಲಿರುವ **ಒಕ್ಕಲು** ಎಂಬ ಶಬ್ದ ಹಾಗೂ ಇವರ ಮಹಿಳೆಯರು ಸೀರೆ ಉಡುವ ಕ್ರಮ.

ಹಾಲಕ್ಕಿ ಒಕ್ಕಲು :

ಕರ್ನಾಟಕದ ದಕ್ಷಿಣ ದಿಕ್ಕಿನಲ್ಲಿ ಪೂರ್ವ ಕಾಲದಿಂದ ನೆಲೆಸಿರುವ ಕೆಲವು ಜನಸಮುದಾಯಗಳು ತಮ್ಮ ಜಾತಿಯ ಸಮುದಾಯಕ್ಕೆ **ಒಕ್ಕಲಿಗರು** ಎಂದು ತಮ್ಮ ಕೃಷಿವೃತ್ತಿ ಮೂಲೀಯ ಹೆಸರನ್ನು ಹೊಂದಿರುತ್ತಾರೆ. ಹಾಗು ತಮ್ಮ ಜಾತಿಯ ಒಳ ಗುಂಪಿಗೆ ಒಕ್ಕಲಿಗರು ಎಂಬ ಶಬ್ದದ ಜೊತೆಗೆ ಆಯಾ ಗುಂಪನ್ನು ವಿಶಿಷ್ಟವಾಗಿ ತಿಳಿಸುವ ವಿಶೇಷಣವನ್ನು ಹೊಂದಿರುತ್ತಾರೆ. ಉದಾ :

ಗಂಗಡಿಕಾರ ಒಕ್ಕಲಿಗರು; ಕುಂಜೆಟ್ಟಿಗ ಒಕ್ಕಲಿಗರು ; ಬೆರಳ ಕೊಡು ಒಕ್ಕಲಿಗರು (ಕೋಲಾರ) ಇತ್ಯಾದಿ. ಆದರೆ ತಮ್ಮಲ್ಲಿಯ ಕುಲಸೂಚಕವಾದ ಹೆಸರನ್ನು ಹೇಳುವಾಗ ಇವರು **ಒಕ್ಕಲು** ಎಂಬ ವಿಶೇಷಣವನ್ನು ಬಳಸುತ್ತಾರೆ. ಉದಾ : ಗಂಗಡಿಕಾರ ಒಕ್ಕಲಿಗರಲ್ಲಿ ಈಸಲಗೆರೆ **ಚೌಡಮ್ಮನ ಒಕ್ಕಲು, ಮಂಚಮ್ಮನ ಒಕ್ಕಲು** ಇತ್ಯಾದಿ ಕುಲ ಸೂಚಕ ಹೆಸರುಗಳಿರುತ್ತವೆ ಹಾಗೂ ಇಲ್ಲಿಯ ವಿಶೇಷಣ ಶಬ್ದವು ಸಾಮಾನ್ಯವಾಗಿ ಬುಡಕಟ್ಟು ದೇವರಿಗೆ ಸಂಬಂಧಿಸಿರುತ್ತದೆ ಯೆಂಬುದನ್ನು ಗಮನಿಸಬೇಕು. ಈ ಬಗೆಯಾಗಿ ದಕ್ಷಿಣ ಕರ್ನಾಟಕದ ಜನಸಮುದಾಯವು ತಮ್ಮ ಒಳ ಗುಂಪುಗಳನ್ನು ಒಕ್ಕಲು ಎಂಬ ಗುಣ ವಿಶೇಷ್ಯದೊಂದಿಗೆ ಗುರುತಿಸುತ್ತಿದ್ದು ಈ ಕ್ರಮವನ್ನು ಹಾಲಕ್ಕಿ ಒಕ್ಕಲು ಕೂಡ ಅನುಸರಿಸಿದ್ದಾರೆಂಬುದನ್ನು ಇಲ್ಲಿ ಗಮನಿಸಬಹುದು. ಇವರ ಹೆಸರಿನಲ್ಲಿರುವ ಹಾಲಕ್ಕಿ ಎಂಬುದು ಮೂಲದಲ್ಲಿ ಇವರ ಕುಲದೇವರಾಗಿರಬಹುದು. ಸದ್ಯ ಹಾಲಕ್ಕಿ ಒಕ್ಕಲು ಎಂಬ ಕುಲನಾಮವು ಇವರ ಜಾತಿನಾಮವೂ ಆಗಿ ಜಾರಿಯಲ್ಲಿದೆ. ಇವರಂತೆಯೇ ಕರ್ನಾಟಕದ ದಕ್ಷಿಣ ಭಾಗದಿಂದ ಉತ್ತರ ಕನ್ನಡಕ್ಕೆ ಬಂದಿರಬಹುದೆಂದು ತರ್ಕಿಸಲಾದ ಗಾಮೊಕ್ಕಲು, ಕರೆಒಕ್ಕಲು ಮುಂತಾದ ಜನಸಮುದಾಯದವರೂ 'ಒಕ್ಕಲು' ಶಬ್ದವನ್ನು ತಮ್ಮ ತಮ್ಮ ಗುಂಪುಗಳಿಗೆ ವಿಶೇಷ್ಯವಾಗಿ ಬಳಸಿದ್ದಾರೆ. ಹಾಗೂ ದಕ್ಷಿಣ ಕರ್ನಾಟಕದ ಒಕ್ಕಲಿಗರು ಬಳಸುವಂತೆ ಗೌಡ ಎಂಬ ಅಡ್ಡ ಹೆಸರನ್ನು ಈ ಗುಂಪಿನವರು ಹೊಂದಿರುತ್ತಾರೆ.

ಸೀರೆ ಉಡುವ ಕ್ರಮ :

ಹಾಲಕ್ಕಿ ಒಕ್ಕಲ ಮಹಿಳೆಯರು ಸೀರೆ ಉಡುವ ಕ್ರಮವನ್ನು ಗೇಟ್ಗಿ ಪದ್ಧತಿಯೆನ್ನಲಾಗುತ್ತದೆ. ಇವರು ಸೀರೆಯ ಸೆರಗನ್ನು ಇಲ್ಲಿಯ ಇತರ ಜಾತಿಯವರಂತೆ ಹೆಗಲ ಮೇಲೆ ಇಳಿ ಬಿಡುವುದಿಲ್ಲ. ಕೊಡಗಿನ ಮಹಿಳೆಯರಂತೆ ಹೆಗಲ ಮೇಲೆ ಕಟ್ಟುತ್ತಾರೆ. ಇವರು ಸೀರೆ ಉಡುವಾಗ ಅನುಸರಿಸುವ ನಿರಿಗೆ ಪದ್ಧತಿಯೂ ಸ್ಥಳೀಯರಂತಿಲ್ಲ. ಇವರು ಕೊಡಗಿನತ್ತಣಿಂದ ಬಂದವರೆಂಬುದಕ್ಕೆ ಇದು ಆಧಾರ ವನ್ನೊದಗಿಸುತ್ತದೆ. ಈ ಸಂಗತಿಯನ್ನು ಎತ್ತಿ ಹಿಡಿಯುವಂತೆ

ಕೊಡಗಿನ ಹಲವು ಜಾತಿಯ ಮಹಿಳೆಯರು ಉತ್ತರ ಕನ್ನಡದ ಹಾಲಕ್ಕಿ ಒಕ್ಕಲತಿಯರಂತೆ ಸೀರೆ ಉಡುತ್ತಾರೆಂಬುದನ್ನು ಗಮನಿಸಬಹುದಾಗಿದೆ. ಕೊಡವ ಮಹಿಳೆಯರು ಹಾಗೂ ಕೊಡಗಿನ ಆಸುಪಾಸು ವಾಸಿಸುವ ಕುಡಿಯರು, ಮಲೆಕುಡಿಯರು ತಾವು ಉಟ್ಟ ಸೀರೆಯ ನಿರಿಗೆಗಳನ್ನು ಹಿಂಬದಿಯಲ್ಲಿ ತುಸು ಬಲಬದಿಗೆ ಸಿಕ್ಕಿಸುತ್ತಾರೆ. ಇವರು ತಾವು ಈ ಬಗೆಯಾಗಿ ತಿರುಚಿ ಸೀರೆ ಉಡುವುದಕ್ಕೆ ಕಾರಣವನ್ನು ವಿವರಿಸುತ್ತ ಕೊಡಗಿನಲ್ಲಿ ಹರಿಯುವ ಕಾವೇರಿಯು ತಿರುಚಿ ಹರಿಯುವ ವಿಧಾನವನ್ನು ಪ್ರಸ್ತಾಪಿಸುತ್ತಾರೆ.

ಕಾವೇರಿ ನದಿಯು ಪಶ್ಚಿಮಕ್ಕೆ ಹರಿಯುತ್ತ ಮುಂದೆ ಶ್ರೀರಂಗಪಟ್ಟಣದ ಹತ್ತಿರ ತನ್ನ ಹರಿಯುವ ದಿಕ್ಕನ್ನು ಬದಲಿಸಿಕೊಂಡು ಪೂರ್ವಾಭಿಮುಖವಾಗಿ ಹರಿಯುತ್ತಾಳೆ. ಹೀಗೆ ಕಾವೇರಿಯು ತಿರುಚಿಕೊಂಡು ಹರಿಯುವ ಕಾರಣ ತಾವು ಸೀರೆಯನ್ನು ಈ ರೀತಿಯಾಗಿ ತಿರುಚಿ ಉಡುತ್ತೇವೆ ಎನ್ನುತ್ತಾರೆ. ಆದರೆ ಈ ಬಗೆಯ ಐತಿಹ್ಯವು ಹಾಲಕ್ಕಿ ಮಹಿಳೆಯರ ಬಳಿ ದೊರೆಯುತ್ತಿಲ್ಲವಾದರೂ, ಕೊಡಗು ರಾಜ್ಯದ ಹಲವು ಜನ ಸಮುದಾಯದವರು ಈ ಬಗೆಯಾಗಿ ತಿರುಚಿ ಸೀರೆ ಉಡುವುದನ್ನು ಗಮನಿಸುವಾಗ ಕಾವೇರಿ ತೀರದಿಂದ ಹಾಲಕ್ಕಿ ಒಕ್ಕಲು ಇತ್ತ ಬಂದಿರಬಹುದು ಎನಿಸುತ್ತದೆ. ಕೊಡಗಿನಿಂದ ಉತ್ತರಕ್ಕೆ ವಲಸೆಹೋದ ಒಂದು ಗುಂಪಿಗೆ ಹಾಲಕ್ಕಿಯೆಂಬ ಹೆಸರಿದ್ದ ಬಗ್ಗೆ ಕೊಡವರು ಎಂಬ ಒಂದು ಪುಸ್ತಕದಲ್ಲಿ ಓದಿದ ನೆನಪಿದೆ. ಈ ಆಧಾರಗಳಿಂದ ಹಾಲಕ್ಕಿ ಒಕ್ಕಲು ಎಂಬ ಕುಲನಾಮವನ್ನು ಹೊಂದಿದ ಗುಂಪೊಂದು ಕೊಡಗಿನ ಕಡೆಯಿಂದ ಇಲ್ಲಿಗೆ ಬಂದಿರಬಹುದೆಂದು ತರ್ಕಿಸಬಹುದಾಗಿದೆ. ಉತ್ತರ ಕನ್ನಡ ಜಿಲ್ಲೆಗೆ ಬಂದ ಇವರು ಕರಾವಳಿಯ ಸಮೀಪದ ಗುಡ್ಡದ ಮೇಲೆ ಹಾಗೂ ಗುಡ್ಡದ ಕರೆಗಳಲ್ಲಿ ರಾಗಿ ಮತ್ತು ಬತ್ತದ ಕೃಷಿಯನ್ನು ಕೈಗೊಂಡರು.

ನೆಲೆಗಳು :

ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಕರಾವಳಿ ತೀರದಿಂದ ಸುಮಾರು 5 ರಿಂದ 20 ಕಿ.ಮೀ. ಒಳಗಿನ ಕರಾವಳಿಯ ತೀರ ಹಾಗೂ ಸಹ್ಯಾದ್ರಿಯ

ಬದಿಗಳಲ್ಲಿ ಇವರು ನೆಲೆಸಿದ್ದಾರೆ. ಆದರೆ ಅಂಕೋಲಾ ಮತ್ತು ಕಾರವಾರ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಹಾಲಕ್ಕಿ ಒಕ್ಕಲ ಪೂರ್ವಜರ ನೆಲೆಗಳು ದುರ್ಗಮವಾದ ಕಾರವಾರದ ಸಹ್ಯಾದ್ರಿಯ ಗುಡ್ಡಗಳಲ್ಲಿದ್ದವೆಂಬ ಬಗ್ಗೆ ಆಧಾರಗಳು ದೊರೆಯುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿಯ ಅಂಕೋಲಾ ತಾಲ್ಲೂಕಿನ ಹಾಲಕ್ಕಿ ಒಕ್ಕಲ ಈ ನೆಲೆಗಳ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿರುವವರು ಸುಕ್ರಿ ಬೊಮ್ಮಗೌಡ.

ಇವರು ನಾಡಿನ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯ ಗೌರವ ಪಡೆದ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಬಡವರ ನೆಲೆಗಳಲ್ಲೊಂದಾದ ಬಡಗೇರಿಯ ಹಾಲಕ್ಕಿ ಒಕ್ಕಲ ಮಹಿಳೆ. ಹಾಲಕ್ಕಿ ಒಕ್ಕಲ ನೆಲೆಗಳ ಬಗ್ಗೆ ಹಾಗೂ ಇವರ ಕುರಿತು ಇನ್ನಿತರ ಮಾಹಿತಿ ಪಡೆಯಲು ಹಾಗೂ ಸುಕ್ರಿಯವರನ್ನು ಪರಿಚಯಿಸಲು ಸುಕ್ರಿಯವರೇ ಬಹುದೊಡ್ಡ ಆಕರ ಗ್ರಂಥದಂತಿದ್ದಾರೆ. ಇವರಿಂದಲೇ ಈ ಕಿರು ಪುಸ್ತಕಕ್ಕೆ ಹೆಚ್ಚಿನ ಮಾಹಿತಿ ಪಡೆಯಲಾಗಿದೆ. (ಸುಕ್ರಿಯ ಹೆಸರಿನಲ್ಲಿಯ ಮೊದಲಕ್ಷರ 'ಸು' ಹಾಲಕ್ಕಿ ಒಕ್ಕಲ ಸಮಾಜದಲ್ಲಿಯ ಜನರ ಬಾಯಲ್ಲಿ ಇದು ಚು ಎಂದು ಉಚ್ಚಾರಗೊಂಡರೆ ಅವರ ಸಮಾಜದ ಬಳಿ ವಾಸಿಸುತ್ತಿರುವ ಇತರರ ನಾಲಿಗೆಯಲ್ಲಿ 'ಸು' ಎಂದು ಉಚ್ಚಾರಗೊಳ್ಳುತ್ತದೆ. ಓದು ಬರೆಹ ಕಲಿತವರು 'ಸು'ವನ್ನು 'ಶು' ಎಂದು ಉಚ್ಚರಿಸುತ್ತಾರೆ. ಹೀಗಾಗಿ ಸುಕ್ರಿಯ ಹೆಸರು ಚುಕ್ರಿ, ಸುಕ್ರಿ, ಶುಕ್ರಿ ಹೀಗೆ ಮೂರು ಬಗೆಯಾಗಿ ಉಚ್ಚಾರಗೊಳ್ಳುತ್ತದೆ. ಇಂಥ ಪ್ರಕ್ರಿಯೆಯು ದ್ರಾವಿಡ ಭಾಷಾ ಕುಟುಂಬದಲ್ಲಿ ಸಹಜ. ಹಾಲಕ್ಕಿ ಒಕ್ಕಲ ಭಾಷೆಯೂ ದ್ರಾವಿಡ ಭಾಷೆಗೆ ಸೇರಿದ ಒಂದು ಸಾಮಾಜಿಕ ಉಪಭಾಷೆ ಆಗಿದೆ.)

ನನ್ನ ಊರು ಭಾವಿಕೇರಿ. ಈ ನನ್ನ ಊರಿನ ಒಂದು ಮಜರೆಯೇ ಬಡಗೇರಿ. ಈ ಮಜರೆಗೆ ಸೇರಿದ ಇವರನ್ನು ಇಲ್ಲಿ 'ಸುಕ್ರಿ' ಎಂದು ಸಂಬೋಧಿಸುತ್ತಾರೆ. ನಾನು ಕೂಡ ಇವರನ್ನು ಇಲ್ಲಿ 'ಸುಕ್ರಿ' ಎಂಬ ಹೆಸರನ್ನು ಬಳಸಿಕೊಂಡು ಬರೆಯುತ್ತಿದ್ದೇನೆ.

ಕಾರವಾರ ಸಮೀಪದ ಗುಡ್ಡಗಳಲ್ಲಿ ಕಾರವಾರ ಮತ್ತು ಅಂಕೋಲಾ ತಾಲ್ಲೂಕಿನ ಒಕ್ಕಲ ಹಿರಿಯರ ಪರಂಪರಾಗತ ಬಳಿ ಎಂಬ ಕುಲನಾಮಗಳಿಗೆ ಸಂಬಂಧಪಟ್ಟ ಅನೇಕ ಕುಲ ದೇವಾಲಯಗಳಿವೆಯೆಂದು ಸುಕ್ರಿ ವಿವರಿಸುತ್ತಾರೆ. ಈಗಲೂ ಇಲ್ಲಿ ಹಾಲಕ್ಕಿ ಒಕ್ಕಲು ಪೂಜೆ ಹರಕೆಗಳನ್ನು ಸಲ್ಲಿಸಲು ಈ ಸ್ಥಳಗಳಿಗೆ ಭೆಟ್ಟಿ ಕೊಡುತ್ತಾರೆ. ಸುಕ್ರಿಯೂ ಅನೇಕ ಬಾರಿ ಈ ಪ್ರದೇಶಗಳಿಗೆ ಹೋಗಿ ಬಂದಿದ್ದಾರೆ. ಇಲ್ಲಿಯ ದೇವರ ಮನೆಯ ಮುಂದಿರುವ ಬಸವ ಮುಂಗಾಲು ಕೊಟ್ಟು ಮಲಗಿದ ಪರಿಯನ್ನು ಅನೇಕ ಬಾರಿ ಕಂಡು ಬಂದಿದ್ದಾರೆ. ಇದನ್ನು ಮೆಲಕು ಹಾಕುತ್ತ ಸುಕ್ರಿ ಹಾಡಲು ತೊಡಗುತ್ತಾರೆ.

ಎತ್ತಾಗಿಂದ್ ಬಂದೊ ಮುತ್ತಿನ ಕೊಂಬಿನ ಬಸವ
ಮುಂಗಾಲ ಕೊಟ್ಟೇ ಮಲಗೀದೊ
ಮುಂಗಾಲ ಕೊಟ್ಟೇ ಮಲಗೀದೊ ಬಸವಯ್ಯನೆ
ಏಳೇಳೋ ಬಸವಯ್ಯ ಮನೆಗೋಗ್ವೊ
ಏಳೇಳೋ ಬಸವಯ್ಯ ಮನೆಗೋಗ್ವೊ ಮಂಟಪಕೋಗ್ವೊ
ಕೊರಳೀಗೆ ತಂದೀದೆ ಸರ ಗೆಂಟೆ
ಕೊರಳೀಗೆ ತಂದೀದೆ ಸರ ಗೆಂಟಿ ಬಸವಯ್ಯನೆ
ತಿಂಬೂಕೆ ತಂದೀದೆ ಹಸಿಬತ್ತ

ಎಂದು ಹಾಡುತ್ತಾರೆ. ಈ ಹಾಡಿನಲ್ಲಿ ತಿಳಿಸಿರುವಂತೆ ಅಲ್ಲಿಯ ಬಸವನಿಗೆ ಭಕ್ತರು ಗದ್ದೆಯಲ್ಲಿ ಬೆಳೆದ ಹೊಸ ಬತ್ತವನ್ನೇ ನೈವೇದ್ಯವಾಗಿ ಅರ್ಪಿಸುತ್ತಿದ್ದರೆನ್ನಬಹುದು.

ಅಂಕೋಲಾ ಮತ್ತು ಕಾರವಾರ ತಾಲ್ಲೂಕಿನಲ್ಲಿ ನೆಲೆಸಿರುವ ಹಾಲಕ್ಕಿ ಒಕ್ಕಲ ಮುಲಸ್ಥಾನ ಕಾರವಾರದ ಬೈತಖೋಲದಲ್ಲಿದೆ. ಇವರ ಗುರುಮಠ ಅಲ್ಲಿಯ ಮಚ್ಚೋಳಿಯಲ್ಲಿದೆ. ಸುಕ್ರಿ ತಮ್ಮ ಜಾತಿಯ ಆಯಾ ಬಳಿಗೆ ಸಂಬಂಧಿಸಿದ ದೇವರುಗಳು ಇಲ್ಲಿಯ ಗುಡ್ಡಗಳ ಮೇಲೆ ಕಾನನ ಪ್ರದೇಶದಲ್ಲಿವೆಯೆನ್ನುತ್ತಾರೆ. ಇಲ್ಲಿಯ **ಮಂಜಿಲ್** ಬಳಿಯವರ ದೇವರು ಅಮರಳ್ಳಿ (ಆಮದಳ್ಳಿ) ಗುಡ್ಡೆ

(ಗುಡ್ಡ)ಯ ಮೇಲಿದೆ. **ಕುಂಟಿ** ಬಳಿಯವರ ದೇವರು ಅಲ್ಲಿಯೇ ಸಮೀಪದ ಇನ್ನೊಂದು ಗುಡ್ಡದಲ್ಲಿದೆ. ಕುಂಟಿ ಬಳಿಯ ಹೆಸರು ಒಂದು ಕಾಲು ಕುಂಟಾಗಿರುವ ಕುಂಟಿ ಎಂಬ ದೇವರಿಗೆ ಸಂಬಂಧಪಟ್ಟಿದೆ. ಕಡಿನ ಬಳಿಯವರ ದೇವರು ಪಶುವಿನ ರೂಪದಲ್ಲಿದೆ. ಇದು 'ನಗೆಕೊವೆ' ಎಂಬ ಗುಡ್ಡಗಾಡಿನಲ್ಲಿದೆ. ಇಲ್ಲಿಯ ಗುಡ್ಡದ ಮೇಲೆ ಎರಡು ಬಂಟ ದೇವರಿವೆ. ಇವಕ್ಕೆ **ಬೆಳಿಯೆಲೆಯ ಪೂಜೆ** ನಡೆಯುತ್ತದೆ. ಸಣ್ಣ ಬಂಟನಿಗೆ 3 ಕಟ್ಟು ದೊಡ್ಡ ಬಂಟನಿಗೆ 7 ಕಟ್ಟು ಹೀಗೆ 10 ಕಟ್ಟು ಬಿಳಿಯೆಲೆಯ ಪೂಜೆಯನ್ನು ಹಾಲಕ್ಕಿ ಒಕ್ಕಲು ನೆರವೇರಿಸುತ್ತಾರೆ. ಕಾರವಾರದ ಹತ್ತಿರದ ಬೆಳ್ಳುರ್ಗೆ ಎಂಬ ದಟ್ಟ ಕಾನನದಲ್ಲಿಯೂ ಇವರ ದೇವರಿವೆ. ಸಾಮಾನ್ಯವಾಗಿ ಬುಡಕಟ್ಟುಗಳು ತಾವು ಮೂಲದಲ್ಲಿ ನೆಲೆಸಿದ ಕಡೆ ಹಾಗೂ ಬೇಸಾಯ ಮಾಡುತ್ತಿದ್ದ ನೆಲಯಲ್ಲಿ ತಮ್ಮ ದೇವರನ್ನು ಸ್ಥಾಪಿಸಿಕೊಂಡಿರುತ್ತಾರೆ. ಈ ಕ್ರಮದಂತೆ ಹಾಲಕ್ಕಿ ಒಕ್ಕಲ ಒಂದೊಂದು ಬಳಿಯವರು ಇಲ್ಲಿಯ ಒಂದೊಂದು ಕಡೆಯ ಗುಡ್ಡ ಓರೆಗಳ ಬಳಿ ನೆಲೆಸಿ ಅಲ್ಲಿ ಕುಂಬರಿ ಬೇಸಾಯ ಮಾಡಿಕೊಂಡಿದ್ದರೆಂದು ಹೇಳಬಹುದು. ಕೊಟೆಬಾವಿ, ಮಲ್ಲಾಣಿ, ಜೀಕಳಿ, ಸುಂಕಸಾಳೆ, ಆರ್ಬೈಲ ಮಾಸ್ತಿಕಟ್ಟೆ, ಕೆದಗೆ ಮುಂತಾದ ಕಡೆಗಳಲ್ಲಿಯೂ ಇವರು ಕುಂಬರಿ ಬೇಸಾಯ ನಡೆಸಿದ್ದುಂಟು. ಇಲ್ಲಿಯೂ ಹಾಲಕ್ಕಿ ಒಕ್ಕಲಿಗೆ ಸಂಬಂಧಿಸಿದ ದೇವರಿದ್ದವು. ಕೊಟ್ಟೆಬಾವಿಯಲ್ಲಿಯೂ ಹಲವಾರು ದೇವರಿದ್ದವು. ಆದರೆ ಈಗ ಅವುಗಳ ಅವಶೇಷ ಮಾತ್ರ ಲಭ್ಯವಿವೆ ಎನ್ನುತ್ತಾರೆ. ಕೊಟೆಬಾವಿಯ ದೇವರ ಪೂಜೆ ಹಾಲಕ್ಕಿ ಒಕ್ಕಲ ಸಮಾಜಕ್ಕೆ ಸೇರಿದ ಹೆಗಣೆ ಗುನಗ ಎಂಬ ಪೂಜಾರಿಗೆ ಸೇರಿತ್ತು. ಈ ಗುನಗನ ಕಾಲದಲ್ಲಿ ಕಂದಾಣಿ ಹಳ್ಳದ ಮೂಲಕ ಮಹಾ ನಾಟುಗಳು ಹಟ್ಟಿಕೇರಿ ಹಳ್ಳಕ್ಕೆ ಬರುತ್ತಿದ್ದವು. ಒಂದು ಬಾರಿ ಜರಕಲ್ಲಿ ಎಂಬಲ್ಲಿ ದೊಡ್ಡ ನಾಟು ಸಿಕ್ಕಿಕೊಂಡಿತು. ಈ ಗುನಗ ಇದನ್ನು ಬಿಡಿಸಿಕೊಳ್ಳಲು ಜರ್ಕಲ್ಲಿಯಲ್ಲಿ ಇಳಿದಾಗ ಅಲ್ಲಿಯ ದೇವತೆಗಳು ಏಳುದಿನ ಈ ಗುನಗನನ್ನು ಹಿಡಿದಿಟ್ಟವು. ಇವನನ್ನು ಬಿಡುವಾಗ ಮನೆಗೆ ಹೋಗಿ ಹೆಂಡತಿಗೆ ಹೇಳಬೇಡವೆಂದು ತಿಳಿಸಿದವು. ಆದರೆ ಅವನಿಂದ ಗುಟ್ಟನ್ನು

ಹಿಡಿದಿಡಲಾಗಲಿಲ್ಲ. ಹೆಂಡತಿಗೆ ಈ ವಿಷಯ ತಿಳಿಸಿದನು. ಆದ್ದರಿಂದ ಎರಡನೆಯ ಬಾರಿ ದೇವತೆಗಳು ಇವನನ್ನು ಬಿಡಲಿಲ್ಲ. ಇದು ಆ ಕಾಲದಲ್ಲಿ ನಡೆದ ಅಲ್ಲಿಯ ಕಾಡುನಾಶದ ವಾಸ್ತವ ಸಂಗತಿ. ಸುಕ್ರಿಯ ಬಳಿ ಇದು ಸ್ಥಳ ಪುರಾಣವಾಗಿ ಉಳಿದಿದೆ. ಜರ್ಕಲ್ಲಿನಲ್ಲಿ ಪಾಡವರ ಮೂರ್ತಿಗಳಿವೆ. ಸಿರ್ಕವಲಿಯನ್ನು ತಿನ್ನಲು ಬಂದ ಹುಲಿ ಹಾರಿದ ಸ್ಥಳವಿದೆ. ಕನ್ನೇರು ಸನ್ನೇಸಿ ಮುಂತಾದ ದೇವರಿವೆ. ಕೊಟೆಬಾವಿಯ ದಾರಿಯಲ್ಲಿ ಚಪ್ಪರಸಿ (ಸೊಪ್ಪಡಸಿ) ಭೀಮನ ಬುಗರಿ ಕಲ್ಲಿದೆ ಎನ್ನುತ್ತಾರೆ. ಸುಕ್ರಿ ಹೇಳುವ ಇಂತಹ ನೂರಾರು ಸಂಗತಿಗಳು ದಾಖಲಾಗದೆ ಉಳಿದು ಹೋಗಿವೆ.

ಸುಕ್ರಿ ಅಂಕೋಲ ಎಲ್ಲಾಪುರ ಮಾರ್ಗದಲ್ಲಿರುವ ಪ್ರಸಿದ್ಧ ಮಾಸ್ತಿಕಟ್ಟೆ ದೇವಾಲಯದ ಮೂಲದ ಬಗ್ಗೆ ತಿಳಿಸುತ್ತ ಪಾರನ ಹಳ್ಳದ ಹತ್ತಿರ ಮೂಲ ಮಾಸ್ತಿಯಿದೆ. ಇದನ್ನು ಬುಡದ ಮಾಸ್ತಿಯೆನ್ನುತ್ತಾರೆ. ಇದು ಕರಿ ಒಕ್ಕಲ ದೇವರು. ಕರಿ ಒಕ್ಕಲ ಗುನಗನೇ ಇಲ್ಲಿಯ ಪೂಜಾರಿ ಎನ್ನುತ್ತಾರೆ. ಸನ್ಯಾಸಿಯೊಬ್ಬರು ಬಹು ಜನರಿಗೆ ಈ ಮಾಸ್ತಿಯ ದರ್ಶನ ಲಭಿಸಲಿ ಎಂಬ ಉದ್ದೇಶದಿಂದ ಹಾದಿಬದಿಯಲ್ಲಿ ಇದನ್ನು ಸ್ಥಾಪಿಸಿದರು ಎನ್ನುತ್ತಾರೆ. ಇದು ಇತಿಹಾಸ. ಬಹು ಜನರು ಬಲ್ಲ ಇತಿಹಾಸ. ಆದರೆ ಸ್ಥಳಕ್ಕೆ ಬಂದು ಕ್ಷೇತ್ರ ಕಾರ್ಯ ನಡೆಸದ ಕೆಲವು ವಿದ್ವಾಂಸರು ಇದು ಯುದ್ಧದಲ್ಲಿ ಮಡಿದ ಮಹಿಳೆಗಾಗಿ ಕಟ್ಟಿದ ಠಾಣವೆಂದು ಬರೆಯುತ್ತಾರೆ. ಇಲ್ಲಿಯ ಹಾಲಕ್ಕಿ ಒಕ್ಕಲ ಹಿಂದಿನ ನೆಲೆಗಳಲ್ಲಿಯ ಮತ್ತು ಈ ನೆಲೆಗಳ ಸುತ್ತುಮುತ್ತಲಿನ ಈ ದೇವರುಗಳ ಇತಿಹಾಸ ಕತೆಗಳು ಐತಿಹ್ಯ ರೂಪದಲ್ಲಿ ಸುಕ್ರಿಯ ಬಳಿ ಉಳಿದಿವೆ. ಸುಕ್ರಿಯ ಜೀವಿತ ಕಾಲದಲ್ಲಿಯೇ ಈ ಐತಿಹ್ಯದ ಪ್ರದೇಶವನ್ನು ಪ್ರತ್ಯಕ್ಷವಾಗಿ ಅಧ್ಯಯನ ನಡೆಸುವ ಅವಶ್ಯಕತೆಯಿತ್ತು. ಆದರೆ ಕೊಟೆಬಾವಿ ಪ್ರದೇಶ ನೌಕಾನೆಲೆಗೆ ಸೇರಿದೆ. ಹಾದಿ ಬಂದಾಗಿದೆ. ಹಾಲಕ್ಕಿ ಒಕ್ಕಲು ತಮ್ಮ ಬೇಸಾಯದ ನೆಲೆಗಳಿಗೂ ಹೋಗಲಾರದಂತಹ ಪರಿಸ್ಥಿತಿಯಿದೆ. ಸುಕ್ರಿ ನೇತೃತ್ವದ ತಂಡ ಇದನ್ನು ಪ್ರತಿಭಟಿಸಿತು. ಆದರೆ ಪ್ರಯೋಜನವಾಗಲಿಲ್ಲ.

ಕುಂಬರಿ ಬೇಸಾಯ :

ಸುಕ್ರಿಯ ಪೂರ್ವಜರು ಬೇಸಾಯಗಾರರು. ರಾಗಿ ಇವರ ಪ್ರಮುಖ ಆಹಾರ. ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆ ನಿಂತ ಪ್ರಾರಂಭದ ದಿನಗಳಲ್ಲಿ ತಮ್ಮ ಹೊಟ್ಟೆಪಾಡಿಗಾಗಿ ಇವರು ಕುಂಬರಿ ಬೇಸಾಯವನ್ನು ಅವಲಂಬಿಸಿಕೊಂಡರು. ಚಿಕ್ಕ ಪುಟ್ಟ ಹಿಂಡುಗಳನ್ನು ಕಡಿದು ಅಲ್ಲಿಯ ನೆಲವನ್ನು ಬೆಂಕಿಯಿಂದ ಸುಟ್ಟು ನೆಲ ಕಡಿದು ರಾಗಿ ಬಿತ್ತುತ್ತಿದ್ದರು. ರಾಗಿಯ ಗೊಂಡೆಯನ್ನು ಕಿತ್ತು ತಮ್ಮ ನೆಲೆಯಲ್ಲಿರುವ ನೆಲಗಳಿಗೆ ತರುತ್ತಿದ್ದರು. ಆದರೆ ಕುಂಬರಿ ಬೇಸಾಯದಿಂದಾಗಿ ಕಾಡು ನಾಶವಾಗುತ್ತದೆಯೆಂದುಕೊಂಡು ಈ ಪದ್ಧತಿಯನ್ನು 1885ರ ಹೊತ್ತಿಗೆ ಬ್ರಿಟಿಷರು ಪ್ರತಿಬಂಧಿಸಿದರು. ಆದರೂ ಸುಕ್ರಿಯ ಇತ್ತೀಚಿನ ಕಾಲಮಾನದವರೆಗು ಈ ಬೇಸಾಯ ಜೀವ ಹಿಡಿದುಕೊಂಡಿತ್ತು. ರಾಗಿ ಗದ್ದೆಯು ತೆನೆ ಬಿಡುವ ದಿನಗಳಲ್ಲಿ ಕುಂಬರಿ ಬಿತ್ತಿದ ಕೇರಿಯ ಜನರು ಒಟ್ಟಾಗಿ ಹೊಗಿ ಹೊಲದ ಬಳಿ ಸಣ್ಣ ಸಣ್ಣ ಕೊಟ್ಟಿಗೆ (ಗುಡಿಸಲು) ಕಟ್ಟಿಕೊಳ್ಳುತ್ತಿದ್ದರು. ಹಗಲು ದುಡಿತ. ನಿತ್ಯ ರಾಗಿ ಅಂಬಲಿ ಊಟ. ಸಂಜೆಯಾಗುತ್ತಲೇ ಹೆಂಗಸರೆಲ್ಲ ಹಾಡುತ್ತಿದ್ದರೆ ಗಂಡಸರು ಗುಮಟೆ ಪಾಂಗು ನಡೆಸುತ್ತಿದ್ದರು. ಕಾಡಿನ ನಡುವೆ ಕಳೆದ ಆ ದಿನಗಳನ್ನು ಸುಕ್ರಿ ಸಂತಸದಿಂದ ಮೆಲುಕು ಹಾಕುತ್ತಾರೆ.

ಕುಂಬ್ರಿ ಬೇಸಾಯ ಸಂಪೂರ್ಣ ಕೈತಪ್ಪಿಹೋದ ಬಳಿಕ ಹಾಲಕ್ಕಿ ಒಕ್ಕಲು ತಮ್ಮ ಹೊಟ್ಟೆಪಾಡಿಗಾಗಿ ನಾಡಿನಲ್ಲಿಯ ಭೂ ಮಾಲೀಕರ ಬಳಿ ಕಾರ್ಮಿಕರಾಗಿ ದುಡಿಯತೊಡಗಿದರು. ಈ ದಿನಗಳಲ್ಲಿ ಹಾಲಕ್ಕಿ ಕುಟುಂಬಗಳು ದಾರುಣ ಬಡತನ ಅನುಭವಿಸತೊಡಗಿದವು. ಇಂಥಹ ಬಡತನಕ್ಕೆ ಒಳಗಾದ ಕುಟುಂಬಗಳಲ್ಲಿ **ಅಂಕೋಲಾ ತಾಲ್ಲೂಕಿನ ಶಿರಕುಳಿಯಲ್ಲಿರುವ ಸುಕ್ರಿಯ ತವರು ಮನೆಯ ಕುಟುಂಬವೂ ಒಂದಾಗಿತ್ತು.**

ಸುಮಾರು 100 ವರ್ಷಗಳ ಹಿಂದೆ ಇಲ್ಲಿ ದೇವಿ ಮತ್ತು ಸುಬ್ಬ ಎಂಬ ದಂಪತಿಗಳು ನೆಲೆಸಿದ್ದರು ಇವರಿಗೆ ಇಬ್ಬರು ಹೆಣ್ಣು ಮಕ್ಕಳು, ನಾಲ್ವರು ಗಂಡು ಮಕ್ಕಳು, ಸುಕ್ರಿ ಇವರಲ್ಲಿ ನಾಲ್ಕನೆಯವರಾಗಿ 1942 ರಲ್ಲಿ ಜನಿಸಿದರು.

ಸಿರಕುಳಿಯ ತನ್ನ ತವರು ಮನೆಯಲ್ಲಿ ಎಂತಹ ದಾರುಣ ಬಡತನವಿತ್ತು ಎಂಬುದನ್ನು ತಿಳಿಸಲು ಸುಕ್ರಿ ಪ್ರಯತ್ನಿಸುತ್ತಾರೆ. ಇದು ಹೀಗಿದೆ.

ಮನೆಯಲ್ಲಿ ಹಿರಿಯರು ಸತ್ತಾಗ ಆ ಮನೆಯಲ್ಲಿಯ ಅಟ್ಟ ಅಡುಗೆಯನ್ನು ಹೊರಗೆಸೆಯುವುದು ರೂಢಿಯಿಂದ ಬಂದ ಪದ್ಧತಿ. ಆದರೆ ನೆರೆಹೊರೆಯ ಮನೆಯಲ್ಲಿ ಯಾರಾದರೂ ಸತ್ತರೆ "ಅಟ್ಟ ಅಡುಗೆಯನ್ನು ನೆಲಕ್ಕೆ ಚೆಲ್ಲಿ ಮಣ್ಣು ಮಾಡಬೇಡಿ" ಎಂದು ಹೇಳಿ ಇವರ ತಾಯಿ ಆ ಮನೆಯಲ್ಲಿ ಅಟ್ಟ ಅಡುಗೆಯನ್ನು ತಂದು ತನ್ನ ಮಕ್ಕಳಿಗೆ ಬಡಿಸುತ್ತಿದ್ದಳಂತೆ.

ಹಾಲಕ್ಕಿ ಒಕ್ಕಲ ಕುಟುಂಬಗಳ ಇಂತಹ ದಾರುಣ ಬಡತನಕ್ಕೆ ಪ್ರಮುಖ ಕಾರಣವು ಅಂದಿನ ಸಾಮಾಜಿಕ, ರಾಜಕೀಯ ವ್ಯವಸ್ಥೆ. ಇವರು ಅತ್ಯುತ್ತಮ ಶ್ರಮ ಜೀವಿಗಳಾಗಿದ್ದರೂ, ಇವರಿಗೆ ದುಡಿಯಲು ಸ್ವಂತ ಭೂಮಿಯಿರಲಿಲ್ಲ. ಒಡೆಯನ ಭೂಮಿಯಲ್ಲಿ ದುಡಿದದ್ದರಲ್ಲಿ ಬಹುಪಾಲು ಒಡೆಯನಿಗೆ ಹಾಗೂ ಸರ್ಕಾರದ ಲೆವಿಗೆ ಸೇರುತ್ತಿತ್ತು. ಒಂದು ಎಕರೆ ಭೂಮಿಯನ್ನು ಸಾಗು ಮಾಡಿದರೆ ನಾಲ್ಕು ಕಂಡಗ ಅಕ್ಕಿಯನ್ನು ಒಡೆಯನಿಗೆ ಕೊಡಬೇಕು. ಸಾಹುಕಾರ ಪಾಂಡೆನ ಅಕ್ಕಿ ಬೇಡ. ಬೆಳಿ (ಬಿಳಿ) ಅಕ್ಕಿಯನ್ನೇ ಕೊಡಿ ಅನ್ನುತ್ತಿದ್ದ. ಪಾಂಡೆನ ಅಕ್ಕಿ ಕೊಟ್ಟರೆ "ಮರದ ಬುಡದಲ್ಲಿ ಹೊಯ್ಯಿ" ಎನ್ನುತ್ತಿದ್ದ. ತಾವು ಬೆಳೆದ ಬತ್ತವನ್ನು ಮನೆಗೆ ತರುವಂತಿರಲಿಲ್ಲ. ಒಡೆಯ ಬಂದು ನೋಡಬೇಕು. ತನ್ನ ಪಾಲು ಒಯ್ಯಬೇಕು. ಉಳಿದದ್ದು ಈ ಬಿತ್ತಿ ಬೆಳೆದವರಿಗೆ ಸಲ್ಲುತ್ತಿತ್ತು. ಇಂತಹ ಕೃಷಿಕ ವೃತ್ತಿ ಹಾಲಕ್ಕಿ ಒಕ್ಕಲನ್ನು ಬಡತನದ ಕೂಪಕ್ಕೆ ತಳ್ಳಿತು. ಆ ಕಾಲದಲ್ಲಿ ಸಾಕಷ್ಟು ದುಡಿದರೂ ಉಪವಾಸ ಬಿದ್ದು ಕಾಲ ಕಳೆಯುವ ದಿನಗಳೇ ಹೆಚ್ಚಾಗಿದ್ದವು. ಇಂತಹ ಬಡತನ ತುಂಬಿದ ಹಾಲಕ್ಕಿ ಒಕ್ಕಲ ನೆಲೆಗಳಲ್ಲಿ ಸಿರಕುಳಿಯೂ ಒಂದು. ಇದು ಅಂಕೋಲಾ ತಾಲ್ಲೂಕಿನಲ್ಲಿದೆ. ಈಗ ಅಲ್ಲಿ ಹಾಲಕ್ಕಿ ಒಕ್ಕಲ ನೂರಾರು ಮನೆಗಳಿವೆ.

ಜಾನಪದ ಗಣಿ :

ಹಾಲಕ್ಕಿ ಒಕ್ಕಲು ಹುಟ್ಟು ಕಲಾವಿದರು. ಇದಕ್ಕೆ ಸುಕ್ರಿಯವರ ಕುಟುಂಬವು

ಅಪವಾದವಾಗಿರಲಿಲ್ಲ ; ಸಾಕ್ಷಿಯಾಗಿತ್ತು. ಸುಕ್ರಿಯ ಅಕ್ಕ ಮತ್ತು ತಾಯಿ ಉತ್ತಮ ಹಾಡುಗಾರರಾಗಿದ್ದರು. ಅಪ್ಪ ಗುಮಟೆ, ವಾದ್ಯಗಾರಿಕೆಯನ್ನು, ಸುಗ್ಗಿ ನೃತ್ಯಗಾರಿಕೆಯನ್ನು ಬಲ್ಲವರಾಗಿದ್ದರು. ಸುತ್ತಮುತ್ತ ಹಾಡುಗಾರ್ತಿಯರಿದ್ದರು. ಸುಗ್ಗಿ ಮತ್ತು ಗುಮಟೆ ಹಾಡುಗಾರರಿದ್ದರು. ಮರ ಮುಟ್ಟು, ಕಳೆ ಕಸ, ಹೊಲ ಮಾಡುವುದು ಬೇಸಾಯ ಮಾಡುವುದು ಇತ್ಯಾದಿಯಾಗಿ ಜಾನಪದದ ವಿವಿಧ ಮುಖಗಳನ್ನು ಬಲ್ಲ ಜ್ಞಾನಿಗಳಿದ್ದರು. ಈ ಜಾನಪದ ಪರಿಸರಕ್ಕೆ ತನ್ನನ್ನು ತೆರೆದುಕೊಂಡು ಅದನ್ನು ಹೀರಿಕೊಳ್ಳುವ ಗುಣ ಸುಕ್ರಿಯಲ್ಲಿತ್ತು. ಇದರಿಂದಾಗಿ ಸುಕ್ರಿಯಲ್ಲಿ ಇಲ್ಲಿಯ ಜಾನಪದ ಶೇಖರಗೊಳ್ಳತೊಡಗಿತು ಬೆಳೆಯತೊಡಗಿತು.

ಸುಕ್ರಿಯಂತಹ ಬುಡಕಟ್ಟು ಬಾಲಕಿಯರ ಬಾಲ್ಯ ಕಳೆಯುವುದು ಸಾಮಾನ್ಯವಾಗಿ ಮನೆವಾರ್ತೆ ಮತ್ತು ಕೃಷಿ ಕಾರ್ಮಿಕ ಕೆಲಸದಲ್ಲಿ. ಸುಕ್ರಿಯೂ ಸಾಲೆ ಕಲಿತವರಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸೆಗಣಿ ತರಲು ಹೋಗುತ್ತಿದ್ದರು. ಸೆಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸೆಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು ಗದ್ದೆ ಬಯಲನ್ನೆ ಕ್ರೀಡಾಂಗಣವನ್ನಾಗಿಸಿಕೊಳ್ಳುತ್ತಿದ್ದರು. ಅಟ್ಟೆ ಆಟ; ಕಣ್ಣುಟ್ಟಾಟ; ಹುಳ್ಕಿ ಮಂಡದ ಆಟಗಳಿಗೆ ಈ ಬಯಲುಗಳೇ ಜನಪದ ತರಬೇತಿ ಶಾಲೆಗಳಾದವು. ಇಲ್ಲಿಯೇ ಸುಕ್ರಿ ಹೆಣ್ಣು ಮಕ್ಕಳ ಜೊತೆ ತಾರ್ಲೆ ಕುಣಿದರು. ಪರರ ಕಳೆಗದ್ದೆ ನೆಟ್ಟಿ ಗದ್ದೆಗಳಲ್ಲಿ ಕೃಷಿ ಕಾರ್ಮಿಕಳಾಗಿ ದುಡಿಯುವಾಗ ಅಲ್ಲಿಯ ಜನಪದ ಹಾಡುಗಾರ್ತಿಯರ ಜೊತೆ ಕೆಲಸ ಮಾಡುತ್ತ ಅವರ ಜನಪದ ಸಾಹಿತ್ಯವನ್ನು ತನ್ನದಾಗಿಸಿ ಕೊಂಡರು. ಹಬ್ಬ ಹುಣ್ಣಿಮೆಯ ಹಾಡುಗಳು, ಮದುವೆ, ಚೊಳಂಗಿ, ಬಸುರಿ, ಬಾಳಂತಿ ಹಾಡುಗಳು, ಸಾಮಾಜಿಕ ಪೌರಾಣಿಕ ಕಥನಪರ ಹಾಡುಗಳು, ತಾರ್ಲೆಹಾಡುಗಳು ಇವರ ನೆನಪಿನ ಕಣಜದಲ್ಲಿ ಒಟ್ಟುಗೂಡಿದವು.

ಈ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲು ಸಹಿತವಾಗಿ ಬ್ರಾಹ್ಮಣೇತರರ ಸಮಾಜದಲ್ಲಿಯ ಹಬ್ಬ ಮದುವೆಯಂತಹ ಆಚರಣೆಗಳ ಸಂದರ್ಭದಲ್ಲಿ ಬ್ರಾಹ್ಮಣ ಪೌರೋಹಿತ್ಯವಿರಲಿಲ್ಲ. ಇತ್ತೀಚೆಗೆ ನುಸುಳಿಕೊಂಡಿರುವ ಬ್ರಾಹ್ಮಣ ಪೌರೋಹಿತ್ಯವು, ಈ ಹಿಂದೆ ಜನಪದ ಹಾಡುಗಳು ಅವುಗಳ

ಜೊತೆಗೂಡಿರುವ ಆಚರಣೆಗಳು ಕೂಡಿ ಬೆಸೆಯುವ ಕುಟುಂಬ ಸಾಮರಸ್ಯ ಸಂಬಂಧಕ್ಕೆ ಧಕ್ಕೆ ತಂದಿದೆಯೆಂಬುದನ್ನು ಸುಕ್ರಿ ವಿವರಿಸುತ್ತಾ ಹಲವಾರು ನಿದರ್ಶನಗಳನ್ನು ನೀಡುತ್ತಾರೆ. ಯಾರಿಗೂ ಅರ್ಥವಾಗದ ಭಾಷೆಯಲ್ಲಿರುವ ಭಟ್ಟರ (ಪುರೋಹಿತರ) ಮಂತ್ರಗಳಿಗೂ ಸಾಂದರ್ಭಿಕ ಆಚರಣೆಗಳಿಗೂ ಸಂಬಂಧವೇ ಇಲ್ಲ. ಅವು ಮನುಷ್ಯರ ನಡುವಿನ ಸಂಬಂಧವನ್ನು ಬೆಸೆಯುವುದಿಲ್ಲವೆಂದು ತಿಳಿಸುತ್ತಾರೆ. ಇವರು ತಿಳಿಸುವ ಮದುವೆ ಹಾಡೊಂದರ ಉದಾಹರಣೆಯನ್ನು ಇಲ್ಲಿ ಎತ್ತಿಕೊಳ್ಳೋಣ.

ದೊಡ್ಡ ಮಡಕೆಯಲಿ ದೊಡ್ಡಕ್ಕಿ ಅನ್ನ ಅಟ್ಟೆ
ತಂದೇ ಎಡಮಾಡೆ ಪುರಿಸಗೆ । ನಿನ್ನಾ ನಲ್ಲ
ಉಣ್ಣು ಉಣ್ಣೆಂದರೂ ಉಣನಿಲ್ಲ । ನಿನ್ನ ನಲ್ಲ
ಬಾವದಿರ ಬಿಟ್ಟೇ ಉಣನೆಂದ । ನಿನ್ನ ನಲ್ಲ
ಸೆಣ್ಣವನಾದರೂ ಸರಿಜಾಣಾ ।

ಮದುವೆಯ ಒಂದು ಚಡಂಗದಲ್ಲಿ ಮದುಮಗ ತನ್ನ ಹೆಂಡತಿಯ ಸಹೋದರರನ್ನು ಜೊತೆಯಲ್ಲಿ ಕುಳ್ಳಿರಿಸಿಕೊಂಡು ಊಟ ಮಾಡಬೇಕು. ಮನೆಯಕ್ಕತಂಗಿಯರು (ಮದುಮಗಳು ಮತ್ತು ಮದುಮಗಳ ಭಾವನ ಹೆಂಡತಿ) ಒಂದೇ ಪಂಕ್ತಿಯಲ್ಲಿ ಊಟ ಮಾಡಬೇಕು ಎಂಬುದು ಈ ಸಂದರ್ಭದ ವಿಧಿ. ಮದುವೆಯಲ್ಲಿಯ ಈ ಆಚರಣೆಯನ್ನು ಮದುವೆಯ ಹಾಡುಗಳಲ್ಲಿ ಹಿಡಿದಿಡಲಾಗಿದೆ. ಅವುಗಳನ್ನು ಈ ಸಂದರ್ಭದಲ್ಲಿ ವಿಧಿವತ್ತಾಗಿ ಆಚರಿಸಲಾಗುತ್ತದೆ. ಈ ಆಚರಣೆಗಳು ಮದುವೆಯ ಎರಡು ವ್ಯಕ್ತಿಗಳ ನಡುವಿನ ಸಂಬಂಧ ಎಂಬುದನ್ನು ಧೃಢಪಡಿಸುತ್ತವೆ, ಎರಡು ಕುಟುಂಬಗಳ ಸಂಬಂಧವನ್ನು ಗಟ್ಟಿಗೊಳಿಸುತ್ತವೆ. ಸುಕ್ರಿಯವರು ಇಂತಹ ಆಚರಣೆಗಳು ಉಳಿಯಬೇಕು ಎನ್ನುತ್ತಾರೆ. ಈ ಕಾಲದಲ್ಲಿಯೂ ತನ್ನ ಊರಿನ ಹಾಲಕ್ಕಿ ಒಕ್ಕಲು ಹಳೆಪದ್ಧತಿಯ ಮದುವೆ ಆಚರಣೆಗಳನ್ನು ಉಳಿಸಿಕೊಂಡು ಬ್ರಾಹ್ಮಣ ಪುರೋಹಿತರಿಲ್ಲದೆ ಮದುವೆ ಮುಂತಾದ ಆಚರಣೆಗಳನ್ನು ನಡೆಸುವ ಬಗ್ಗೆ ಹೆಮ್ಮೆಪಡುತ್ತಾರೆ.

1. ಬಳಿ ಪದ್ಧತಿ

ಹಾಲಕ್ಕಿ ಎಂಬುದು ಒಕ್ಕಲ ಸಮಾಜ ಒಂದು ಗುಂಪಿನ ಕುಲನಾಮವಾಗಿ ಕೆಲವು ಕಾಲ ಬಳಕೆಯಲ್ಲಿದ್ದರೂ, ಹಾಲಕ್ಕಿ ಒಕ್ಕಲು ಉತ್ತರ ಕನ್ನಡ ಜಿಲ್ಲೆಗೆ ಬಂದ ಕಾಲಾಂತರದಲ್ಲಿ ಬೆಳವಣಿಗೆ ಹೊಂದಿ ಕುಲವನ್ನು ರಕ್ತ ಸಂಬಂಧಿತ ಗುಂಪುಗಳಾಗಿ ಪ್ರತ್ಯೇಕಿಸಿಕೊಳ್ಳುವ ಸಂದರ್ಭ ಬಂದಾಗ ಆಗಿನ ಸ್ಥಳೀಯರಲ್ಲಿ ರೂಢಿಯಲ್ಲಿದ್ದ ಕ್ರಮವನ್ನು ಅವರು ಅನುಸರಿಸಿದರು. ಆಗ ಬಳಿಯ ಹೆಸರನ್ನು ಸಸ್ಯಗಳಿಂದ ಪ್ರಾಣಿಗಳಿಂದ ಪಡೆದುಕೊಳ್ಳುವ ಸಂಪ್ರದಾಯವನ್ನು ಸ್ಥಳೀಯ ಇತರ ಜಾತಿಯವರೂ ಅನುಸರಿಸುತ್ತಿದ್ದರು. ಹಾಲಕ್ಕಿ ಒಕ್ಕಲು ಕುಲ ಸೂಚಕವಾದ ಈ ಬಳಿ ಪದ್ಧತಿಯನ್ನು ತಮ್ಮ ಗುಂಪುಗಳ ಕುಲನಾಮಗಳಿಗಾಗಿ ಅಳವಡಿಸಿಕೊಂಡರು. ಇದು ಇವರಲ್ಲಿ ಬಳಿ ಪದ್ಧತಿಗೆ ಕಾರಣವಾಯಿತೆಂದು ಊಹಿಸಲಾಗಿದೆ. ಏಕೆಂದರೆ ಸ್ಥಳೀಯರಲ್ಲಿ ಕಂಡು ಬರುವ ಬಳಿ ಪದ್ಧತಿಯೂ ಇವರಲ್ಲಿತ್ತು ಎಂಬುದಕ್ಕೆ ಸುಕ್ರಿಯಿಂದ ಆಧಾರಗಳು ದೊರೆಯುತ್ತವೆ. 1.ಕುಂಟಿ ಬಳಿ 2. ದೇವನ ಬಳಿ. 3. ಬಯಲನ ಬಳಿ. 4. ನಾಗೇನ ಬಳಿ. 5. ನುಚ್ಚಕೆ ಬಳಿ. 6. ಮಂಜನ ಬಳಿ. 7. ಗೊಟಕನ ಬಳಿ. 8. ಕಡಿನ ಬಳಿಗಳು ತಮ್ಮ ಸಮಾಜದಲ್ಲಿ ಬಳಕೆಯಲ್ಲಿದ್ದವು ಎನ್ನುತ್ತಾರೆ. ಸುಮಾರು 50 ವರ್ಷಗಳ ಹಿಂದೆ ಸುಕ್ರಿ ಚಿಕ್ಕವಳಿರುವಾಗ, ಇವರ ಊರಿಗೆ ಸಿದ್ಧಣ್ಣ ಎಂಬ ಜನಪದ ಭವಿಷ್ಯ ನುಡಿಯುವವರು ಬರುತ್ತಿದ್ದರಂತೆ. ಇವರು ಒಕ್ಕಲ ಕೇರಿಗೆ ಹೋಗಿ ನಾಲ್ಕಾರು ಬಳಿಗಳ ಹೆಸರುಗಳನ್ನು ಹೇಳಿ "ಈ ಮುಂತಾದ 33 ಬಳಿಗಳ ಭಕ್ತರಿಗೆ ಒಳ್ಳೆಯದಾಗಲಿ" ಎಂದು ಹರಸುತ್ತಿದ್ದರಂತೆ. ಆದರೆ ಈಗ ಲಭ್ಯವಿರುವ ಬಳಿಗಳ ಹೆಸರುಗಳು ಕೇವಲ ಏಳೆಂಟು ಮಾತ್ರ. ಬಳಿಗೆ ಸಂಬಂಧಿಸಿದ ದೇವರುಗಳ ಸಂಖ್ಯೆಯೂ ಹೆಚ್ಚಿಲ್ಲ. ಸಿದ್ದಣ್ಣನ ಹರಕೆಯಲ್ಲಿಯ 33 ಮತ್ತು 66 ಈ ಸಂಖ್ಯೆಗಳು ವಾಸ್ತವಿಕ ನೆಲೆಯವಾಗಿರಲಿಲ್ಲವೆನ್ನಬಹುದಾಗಿದೆ.

ಹಾಲಕ್ಕಿ ಒಕ್ಕಲ ಬಳಿ ಪದ್ಧತಿಯಲ್ಲಿ ಮಾತೃಮೂಲೀಯ ಬಳಿ ಪದ್ಧತಿಯಿರಲಿಲ್ಲವೆಂಬುದು ಸುಕ್ರಿಯೊಂದಿಗೆ ಈ ಕುರಿತು ಮಾತಾಡುವಾಗ

ಸ್ಪಷ್ಟವಾಗಿದೆ. ಇವರ ಬಳಿ ಪದ್ಧತಿಯಲ್ಲಿ ಹೆಣ್ಣು ತವರು ಮನೆಲ್ಲಿರುವವರೆಗೆ ತನ್ನ ತಂದೆಯ ಬಳಿಯನ್ನು ಹೊಂದಿರುತ್ತಾಳೆ. ಮದುವೆಯಾದ ಬಳಿಕ ತನ್ನ ಗಂಡನ ಬಳಿಯನ್ನು ಪಡೆಯುತ್ತಾಳೆ. ಆದರೆ ಗಂಡು ಮಕ್ಕಳು ತಮ್ಮ ಜೀವಮಾನವಿಡೀ ತಂದೆಯ ಬಳಿಯನ್ನು ಹೊಂದಿರುತ್ತಾರೆ. ಉದಾ : ಈ ಕಿರು ಪುಸ್ತಕದ ಮಾಹಿತಿಗಳನ್ನು ನಿರೂಪಿಸಿದ ನಾಡೋಜ ಸುಕ್ರಿಯದು ಬಯಲನ ಬಳಿಯಾಗಿರುತ್ತದೆ. ಬಯಲ ಎಂದರ ಕೋಳಿ ಜಾತಿಗೆ ಸೇರಿದ ಒಂದು ಪಕ್ಷಿ. ಸ್ಥಳೀಯರು ಇದನ್ನು ಬಯ್ಕೋಳಕ್ಕಿ ಎನ್ನತ್ತಾರೆ. ಈ ಹಕ್ಕಿಗೆ ಸಂಬಂಧಿಸಿದಂತೆ ಬಯಲನ ಬಳಿ ಎಂಬುದು ಇವರಿಗೆ ಹುಟ್ಟಿನಿಂದ ಬಂದದ್ದು. ಇವರು ಬಡಗೇರಿಯ ಬೊಮ್ಮಗೌಡರನ್ನು ಮದುವೆಯಾಗಿ ಬಡಗೇರಿಗೆ ಬಂದ ಮೇಲೆ ಇವರು ಬೊಮ್ಮ ಗೌಡರ ಕುಂಟಿ ಬಳಿಯನ್ನು ಹೊಂದಿದರು. ಕುಂಟಿ ಎಂಬುದು ಬುಡಕಟ್ಟುಗಳ ದೇವರ ಹೆಸರು. ಹಾಲಕ್ಕಿ ಒಕ್ಕಲ ಕುಂಟಿ ದೇವರು ಆಮದಳ್ಳಿಯಲ್ಲಿದೆ.

ಹಾಲಕ್ಕಿ ಒಕ್ಕಲ ಬಳಿಗಳು ಅವರು ತಮ್ಮ ಪರಿಸರದಲ್ಲಿ ಕಾಣುವ ಜೀವ ವೈವಿಧ್ಯಕ್ಕೆ ಸಂಬಂಧಪಟ್ಟಿರುವುದು ಗಮನಾರ್ಹ. ಅಷ್ಟೇ ಅಲ್ಲ ಅಂಥ ಜೀವ ವೈವಿಧ್ಯಗಳ ಜೊತೆ ಇವರ ಸಂಬಂಧವೂ ಪರಿಸರ ಸ್ನೇಹಿಯಾದದ್ದು ಎಂಬ ಅಂಶವು ಅಷ್ಟೇ ಮೌಲ್ಯಯುತವಾದದ್ದು.

ಗೊಟಕ ಎಂಬುದು ಪ್ರಮುಖವಾಗಿ ಹಾಲಕ್ಕಿ ಒಕ್ಕಲಲ್ಲಿ ದೊರೆಯುವ ಬಳಿಯ ಹೆಸರು. ಗೊಟಕ ಎಂಬುದು ಒಂದು ಔಷಧ ಸಸ್ಯವೂ ಅಹುದು. ಜಟ್ರೋಫಾ ಕರ್ಕಸ್ ಎಂಬುದು ಇದರ ಸಸ್ಯ ಶಾಸ್ತ್ರೀಯ ಹೆಸರು. ಬತ್ತದ ಗದ್ದೆ ಹೊಡೆ (ತೆನೆ) ಬಿಡುವಾಗ ಬೆಚ್ಚನ ಸಂಕ್ರಾಂತಿಯನ್ನು ಆಚರಿಸಿ ಆ ದಿನ ಗೊಟಕನ ಗಿಡವನ್ನು ನಡುತ್ತಾರೆ. ಈ ಆಚರಣೆಗೆ ಗದ್ದೆ ಗಂಡನನ್ನು ನೆಡುವುದು ಎನ್ನಲಾಗುತ್ತದೆ.

ಈ ಬಳಿಯವರು ಗೊಟಕವನ್ನು ಕಡಿಯಬಾರದು, ಮುಟ್ಟಬಾರದು. ಹೀಗೆ ಆಯಾ ಬಳಿಯವರಿಗೆ ಆಯಾ ಬಳಿಗೆ ಸಂಬಂಧಿಸಿದಂತೆ ನಿಷೇಧಗಳಿವೆ.

ಆಯಾ ಬಳಿಯವರಿಗೆ ಆಯಾ ಬಳಿ ಹೆಸರಿನ ದೇವರಿರುತ್ತದೆ. (ಹೊನ್ನಾವರ ತಾಲ್ಲೂಕಿನಲ್ಲಿ ಈ ದೇವರನ್ನು ಬುಡದ ದೇವರೆನ್ನುತ್ತಾರೆ.) ಕೇದಗಿ ಬಳಿಯವರು ಕೇದಗೆಯನ್ನು ಮುಡಿಯುವುದಿಲ್ಲ. ಈ ಬಳಿಯವರ ದೇವರಿಗೂ ಕೇದಿಗೆಯನ್ನು ಮುಡಿಗೇರಿಸುವುದಿಲ್ಲ. ಹೀಗೆ ಆಯಾ ಬಳಿಯವರು ತಮ್ಮ ಬಳಿಗೆ ಸಂಬಂಧಪಟ್ಟ ಪ್ರಾಣಿ, ಸಸ್ಯ, ಮತ್ತು ಪ್ರಕೃತಿಯ ಅಂಶಗಳನ್ನು ಗೌರವದಿಂದ ಕಾಣುತ್ತಾರೆ. ಅವುಗಳನ್ನು ಹಿಂಸಿಸುವುದಿಲ್ಲ, ಸೇವಿಸುವುದಿಲ್ಲ. ಅಂಕೋಲಾ ತಾಲ್ಲೂಕಿನ ಹಾಲಕ್ಕಿ ಒಕ್ಕಲಿಗೆ ಸಂಬಂಧಿಸಿದ ಬಳಿಗಳ ದೇವರೆಲ್ಲವೂ ಕಾರವಾರ ತಾಲ್ಲೂಕಿನ ಆಮದಳ್ಳಿಯ ಬೆಟ್ಟದಲ್ಲಿವೆ. ಆಯಾ ಬಳಿಯವರಿಗೆ ಅದೇ ಹೆಸರಿನ ದೇವರಿರುವುದು ಇವರ ಬಳಿ ಪದ್ಧತಿಯಲ್ಲಿ ಕಂಡು ಬರುವ ವಿಶೇಷವಾಗಿದೆ. ಕುಂಟಿ ಬಳಿಯರ ದೇವರು ಕೆಂದಗೆ (ಕೇದಗೆ)ಯ ಹೂವನ್ನು ಮುಡಿಯುತ್ತದೆ. ಆದ್ದರಿಂದ ಕುಂಟಿ ಬಳಿಯವರು ಕೇದಗೆ ಮುಡಿಯಬಹುದು. ಆದರೆ ಮಂಜಿಲ್ ಬಳಿಯವರ ದೇವರು ಕೇದಗೆ ಮುಡಿಯುವುದಿಲ್ಲ. ಆದ್ದರಿಂದ ಈ ಬಳಿಯವರು ಕೇದಗೆಯನ್ನು ಮುಡಿಯುವುದಿಲ್ಲ. ಬರಗನಬಳಿ ನಾಗೇನ ಬಳಿಗಳು ಅನುಕ್ರಮವಾಗಿ ಬರಗ ಮತ್ತು ನಾಗ ಈ ಪ್ರಾಣಿಗಳಿಗೆ ಸಂಬಂಧಿಸಿವೆ. ಕಡಿನ ಬಳಿಯಿರುವ ದೇವರು ಪಶುವಿನ ಆಕಾರದಲ್ಲಿದೆ. ಕಡಸು ಕೋಣನಂತೆ ಕಾಣುತ್ತದೆ. ಇದರ ಕೋಡುಗಳು ಮುಂಬದಿಯಲ್ಲಿ ಒಂದಲ್ಲೊಂದು ಕೂಡುವಂತಿದ್ದು ಸುಂದರ ಆಕಾರವನ್ನು ಹೊಂದಿರುತ್ತವೆ. ಸತ್ತ ಕಡಿನ ಕೋಡುಗಳನ್ನು ಹಿಂದಿನ ಜನರು ಅಲಂಕಾರಕ್ಕಾಗಿ ತಮ್ಮ ಮನೆಯ ಗೋಡೆಗೆ ತೂಗುತ್ತಿದ್ದರು. ಗಮೆ ಎಂಬ ಪ್ರಾಣಿಗೆ ಮುಖದ ಮೇಲೆ ಬಿಳಿಪಟ್ಟೆ ಇರುತ್ತದೆ. ಈ ಪ್ರಾಣಿಗಳೆಲ್ಲವೂ ಪಾಂಡವರ ಆಸ್ತಿ ಎಂಬುದನ್ನು ಹೇಳಲು ಸುಕ್ರಿ ಮರೆಯುವುದಿಲ್ಲ.

ಬೇಟೆ ಜ್ಞಾನ

ಸುಕ್ರಿ ಸ್ವತಃ ಬೇಟೆಯಲ್ಲಿ ಭಾಗವಹಿಸಿಲ್ಲವಾದರೂ ಈ ಬಗ್ಗೆ ಸಾಕಷ್ಟು ಮಾಹಿತಿ ನೀಡಲು ಶಕ್ತರಾಗಿದ್ದಾರೆ. ಹಾಲಕ್ಕಿ ಒಕ್ಕಲಲ್ಲಿ ಬೇಟೆಯಾಡುವ ಪದ್ಧತಿಯು ನಿಗದಿತ ದಿನದ ಆಚರಣೆಯಾಗಿ ರೂಢಿಯಲ್ಲಿದೆ. ಇದಕ್ಕೆ ಹೊಲ ಏಳಿಸುವದು

ಎನ್ನುತ್ತಾರೆ. ತುಳಸಿ ಹಬ್ಬದ ಮರುದಿನ ಹೊಲ ಏಳಿಸುವ ಜನರೆಲ್ಲ ಒಟ್ಟಾಗಿ ಹೊಲ ಆಡಲು ಹೊರಡುತ್ತಾರೆ. ದೊಡ್ಡ ಹೊಲ ಏಳಿಸುವಾಗ ಬೇಟೆ ದೇವರ ಮುಂದೆ ಬೇಟೆಗೆ ಸಂಬಂಧಿಸಿದ ಅನೇಕ ಆಚರಣೆಗಳು ನಡೆಯುತ್ತವೆ. ಅಲ್ಲಿರುವ ಬೇಟೆಯ ಸಲಕರಣೆಗಳನ್ನು ಪೂಜಿಸುತ್ತಾರೆ. ತಮ್ಮ ತಮ್ಮ ಬಳಿಯ ದೇವರ ಸಹಾಯ ಪಡೆಯುತ್ತಾರೆ. ಉದಾ: ಕಡಿನ ಬಳಿಯವರು ಕಡಿನ ದೇವರ ಮತ್ತು ಆ ದೇವರ ದೆವ್ವದ ಸಹಾಯ ಪಡೆಯುತ್ತಾರೆ. ಹಂದಿ ಹೊಡೆಯಲು ಹೋಗುವವರು ಹಂದಿ ದೈವವನ್ನು ಏಳಿಸುತ್ತಾರೆ. ಈ ಸಂದರ್ಭದಲ್ಲಿ ಆಯಾ ಊರಿನ ಬುಧವಂತನು ಬಂದು ಸಂಬಂಧಪಟ್ಟ ದೇವರ ಬಳಿ ಹೇಳಿಕೆ ಮಾಡುತ್ತಾನೆ. ಹಾಲಕ್ಕಿ ಒಕ್ಕಲು ಬೇಟೆಂಯ ಬಲೆಗಳನ್ನು ಸ್ವತಃ ತಯಾರಿಸಿಕೊಳ್ಳುತ್ತಾರೆ. ಮೊಲಗಾರಿಕೆಗೆ ಸಣ್ಣ ಬಲೆ ಸಾಕು. ಬರಕ ಕುರಿಗ್ಯಾದಂತಹ ಪ್ರಾಣಿಗಳನ್ನು ಇದರಲ್ಲಿ ಹಿಡಿಯುತ್ತಾರೆ. ಬೇಟೆ ಮುಗಿದ ಬಳಿಕ ಊರ ಹೊರಗಿನ ಒಂದು ನಿಗದಿತ ಸ್ಥಳದಲ್ಲಿ ಕಲ್ಲು ಪೇರಿಸಿದ ಗೂಡಿನಲ್ಲಿ ಬೇಟೆಯ ಸಾಮಗ್ರಿಗಳನ್ನಿಟ್ಟು ಹುಲ್ಲು ಹೊದಿಸುತ್ತಾರೆ. ಪೂಜೆ ಸಲ್ಲಿಸಿ ಕಾರ್ಯಕ್ರಮವನ್ನು ಮುಗಿಸುತ್ತಾರೆ. ಈ ಭಾಗದ ಬೇಟೆಗಾರರು ಬೇಟೆಯ ಸಾಮಗ್ರಿಗಳನ್ನು ಗೌರಿಕೆರೆಯ ಅರೆಯ ಮೇಲೆ ರಕ್ಷಿಸಿಡುತ್ತಾರೆ.

ಆಹಾರಕ್ಕಾಗಿ ಪ್ರಾಣಿಬೇಟೆ ಇವರಲ್ಲಿ ಜಾರಿಯುಲ್ಲಿತ್ತಾದರೂ ಬೇಟೆಯಾಡುವುದಕ್ಕೆ ಸಾಮಾಜಿಕ ಕಟ್ಟುಪಾಡುಗಳಿದ್ದವು. ಇದನ್ನು ಗಂಡಸರು ನಡೆಸುತ್ತಾರೆಯಾದರೂ ಸುಕ್ರಿ ಈ ಆಚರಣೆಯ ಚಡಂಗಗಳನ್ನು ಆಮೂಲಾಗ್ರವಾಗಿ ವಿವರಿಸಬಲ್ಲರು. ಇವರು ನೀಡುವ ವಿವರಗಳು ಗವಿಮಾನವನ ಬೇಟೆ ಕ್ರಮದ ಮೇಲೆ ಬೆಳಕು ಚಲ್ಲುತ್ತವೆ. ಇವು ಪ್ರಾಚೀನ ಬೇಟೆ ಸಂಸ್ಕೃತಿಯ ಅಧ್ಯಯನಕ್ಕೆ ನೆರವು ನೀಡುವಂತಿವೆ.

ಕಾಡಿನ ಸಸ್ಯಜ್ಞಾನ

ಸುಕ್ರಿ ಪ್ರಾಣಿ, ಪಕ್ಷಿ ಮುಂತಾದ ಚರಜೀವಿಗಳ ಸಸ್ಯಾದಿ ಅಚರ ಜೀವವೈವಿಧ್ಯದ ಜ್ಞಾನ ನಿಧಿ. ಅಪ್ಪ ಬೆಟ್ಟದಲ್ಲಿರುವ ಒಡೆಯನ ಗದ್ದೆಯನ್ನು

ಹೂಡಲು ಹೋಗುತ್ತಿದ್ದಾಗ, ತಾಯಿ ಹಾಗೂ ಮನೆಯ ಇತರ ಸದಸ್ಯರು ಇತರ ಕೃಷಿ ಕೆಲಸಕ್ಕೆ ಹೊರಡುತ್ತಿದ್ದರು. ಸುಕ್ರಿ ತನ್ನ ಸುಮಾರು ಹತ್ತನೆಯ ವರ್ಷಕ್ಕೆ ಇವರ ಜೊತೆಗೆ ಕೃಷಿ ಕೆಲಸಕ್ಕೆ ಹೋಗುತ್ತಿದ್ದರು. ಸೊಂಟಕ್ಕೆ ತಾಡಿದ ಚಿಕ್ಕ ಸುಳಿಮುಟ್ಟಿ ; ಈ ಮುಟ್ಟಿಯಲ್ಲೊಂದು ಚಿಕ್ಕ ಹಲ್ಗತ್ತಿ ಇವರ ಜೊತೆಯಲ್ಲಿರುತ್ತಿತ್ತು. ಆ ಚಿಕ್ಕ ವಯಸ್ಸಿನಲ್ಲಿಯೇ ಇವರಿಗೆ ಬೆಟ್ಟದ ಸೊಪ್ಪಿನ ಜ್ಞಾನ ದೊರಕತೊಡಗಿತ್ತು. ಇವರು ಜೊತೆಗಾರ್ತಿಯರ ಜೊತೆಗೆ ಬೆಟ್ಟದಲ್ಲಿ ನಡೆಯುವಾಗ, ಹಾದಿಯ ಇಕ್ಕೆಲಗಳಲ್ಲಿಯ ಮರಗಿಡಗಳು ಇವರಿಗೆ ಆಪ್ತವಾದವು. ಇವುಗಳ ಹೆಸರುಗಳು ನೆನಪಿನಲ್ಲುಳಿದವು. ದನದ ಕೊಟ್ಟಿಗೆಯಲ್ಲಿ ಅವು ಮಲಗುವ ಹಕ್ಕೆಗೆ (ಸ್ಥಳ) ಹರಗಲು ಬಳಸುವ ಮುಳ್ಳುರಹಿತವಾದ ಸೊಪ್ಪುಗಳನ್ನು ಕೊಯ್ದುತರುವದು ಇವರ ಪ್ರತಿ ದಿನದ ಕೆಲಸವಾಗಿತ್ತು. ಚಿರಕಲ, ಹಳ್ಚೆರಿ, ಪೆಪೆ, ಸಗಡೆ, ಹಪ್ಸಗಡೆ, ಕುಚುಮಾಲೆ, ಏಕನಾಯಕ, ಅಡಕೋಳಿ ಮುಂತಾದ ಸೊಪ್ಪುಗಳ ಜ್ಞಾನ ಇವರಿಗಾಯಿತು.

ಸುಕ್ರಿ ದೊಡ್ಡವರಾದ ಮೇಲೆ ಕರಡ ತರುವ, ಸವ್ದೆ ತರುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಆಗ ಮರಮುಟ್ಟುಗಳ ಇನ್ನಷ್ಟು ಜ್ಞಾನ ಇವರ ಮಡಿಲು ತುಂಬಿದವು. ದಿನಗಳೆದಂತೆ ಇವರ ಸಸ್ಯ ಜ್ಞಾನ ಕ್ಷೇತ್ರ ಬಹುವಾಗಿ ಬೆಳೆಯಿತು. ಮುಂದೆ ಇವರು ಬೆಳೆಯುತ್ತಿದ್ದಂತೆ ಇದು ಹೆಚ್ಚು ಹೆಚ್ಚಾಯಿತು. ಆದ್ದರಿಂದಲೇ ಈಗ ಸುಕ್ರಿಯವರ ಜೊತೆ ಕಾಡಿನಲ್ಲಿ ನಡೆಯುವದೊಂದು ಅಪೂರ್ವ ಅನುಭವ. ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಔಷಧಶಾಸ್ತ್ರ ಮುಂತಾದ ಜನಪದ ಶಾಸ್ತ್ರಗಳ ಭಂಢಾರವೇ ನಮ್ಮ ಜೊತೆ ನಡೆಯುತ್ತಿದ್ದಂತೆ ಅನಿಸುತ್ತದೆ. ಸುಕ್ರಿ ಪ್ರತಿ ಗಿಡಕ್ಕೂ ತನ್ನ ಪರಿಸರದ ಕನ್ನಡ ಜನಪದ ಹೆಸರುಗಳನ್ನು ಹೇಳುತ್ತ ಆಯಾ ಸಸ್ಯಗಳನ್ನು ತೋರಿಸುತ್ತ ಸಾಗುತ್ತಾರೆ. ಆಯಾ ಸಸ್ಯಗಳು ಸೊಪ್ಪಾಗಿ, ಉರುವಲಾಗಿ, ನಾಟಾಗಿ ಬಳಕೆಯಾಗುವ ವಿವರವಾದ ಮಹಿತಿಯನ್ನು ನೀಡುತ್ತಾರೆ. ಆಯಾ ಸಸ್ಯಗಳ ಗುಣಧರ್ಮಗಳು ಜನಪದ ಧಾರ್ಮಿಕ ಕಾರ್ಯಗಳಲ್ಲಿ ಆಚರಣೆಗಳ ಸಂದರ್ಭದಲ್ಲಿ ಅವುಗಳ ಸ್ಥಾನಮಾನ; ಕೃಷಿಯಲ್ಲಿ ಮದ್ದಿನಲ್ಲಿ ಹಾಗೂ ಕಾಡಿನ ಆಹಾರವಾಗಿ ಅವುಗಳ ಬಳಕೆ ಇತ್ಯಾದಿ ವಿಷಯಗಳು

ಸುಲಭ ಶಬ್ದಗಳಲ್ಲಿ ಪ್ರಣೀತಗೊಳ್ಳುತ್ತವೆ. ನನ್ನ ಮನೆಯ ಬಳಿಯ ಚಿಕ್ಕ ಕಾಡಿನಲ್ಲಿದ್ದ ಬಂದಾರೆ ಸೊಪ್ಪು, ಮಚಲೆ ಸೊಪ್ಪು; ಜಾಂಗಳಿ ಗಡ್ಡೆ ಮುಂತಾದ ಅಪೂರ್ವ ಆಹಾರ ಸಸ್ಯಗಳನ್ನು ಬಾಣಂತಿಯರಿಗೆ ನಂಜೇರದಂತೆ ರಕ್ಷಿಸಬಲ್ಲ ನಂಜಿನ ಗಡ್ಡೆಯೆಂಬ ಔಷಧ ಸಸ್ಯವನ್ನು ನನಗೆ ಮೊದಲ ಬಾರಿಗೆ ಪರಿಚಯಿಸಿದವರು ಸುಕ್ರಿ. ಇವರ ಈ ಸಸ್ಯಜ್ಞಾನ ನಿಧಿಯನ್ನು ಅಕ್ಷರಕ್ಕಿಳಿಸಿದರೆ ಹಲವು ಗ್ರಂಥಗಳು ಸಿದ್ಧವಾಗಬಹುದು. ಇವರ ಒಂದು ಗುಣ ವಿಶೇಷವೆಂದರೆ ತಾವು ಬಲ್ಲದ್ದನ್ನೆಲ್ಲ ಆಯಾಸಗೊಳ್ಳದೆ, ನಿರಾಳವಾಗಿ ಒರೆಯುತ್ತ ಸಾಗುತ್ತಾರೆ. ಆದರೆ ಅದನ್ನೆಲ್ಲ ದಾಖಲಿಸುವ ವ್ಯವಧಾನವಿದ್ದವರು ಸದ್ಯ ಹುಟ್ಟಿಕೊಂಡಿಲ್ಲ.

ಸುಕ್ರಿ ಸಾಮಾನ್ಯ ಹುಲ್ಲು ಕಡ್ಡಿಗಳ ಬಗ್ಗೆಯೂ ಚೆನ್ನಾಗಿ ಬಲ್ಲರು. ಚಿಕ್ಕ ಚಿಕ್ಕ ಹುಲ್ಲುಗಳ ನಡುವೆ ಸುಕ್ರಿಯ ಜೊತೆ ನಡೆಯುವುದೇ ಪ್ರತ್ಯಕ್ಷ ಅನುಭವಕ್ಕೆ ತೆರದ ಬಯಲು. ಕಣ್ಣಿಗೆ ಕಂಡ, ಕಾಲಿಗೆ ತೊಡಕಿದ ಈ ಹುಲ್ಲುಗಳ ವೈವಿಧ್ಯವನ್ನು ನಮಗೆ ತೋರಿಸುತ್ತ ಇದು ಅಂಬುಗೋಲಿ, ಇದು ಕಡಕೇರಿ, ಇದು ಕರಡ, ಇದು ಗೊಂಡೆಗರಡ, ಇದು ಕೋಲಿಹುಲ್ಲು ಇದು ಗುಬ್ಬಿಹುಲ್ಲು ಎಂದು ಲೀಲಾಜಾಲವಾಗಿ ಯಾವ ಅಡೆತಡೆಯಿಲ್ಲದೆ ಮರೆವಿಗೆ ಒಳಗಾಗದೆ ಹೇಳುತ್ತ ಸಾಗುತ್ತಾರೆ.

ಈ ಹುಲ್ಲುಗಳ ಹೆಸರೊಂದೇ ಅಲ್ಲ, ಇವುಗಳ ಬಯೋಗ್ರೆಫಿಯಾ ಇವರಿಗೆ ವಿವರವಾಗಿ ಗೊತ್ತು. ಅಂಬುಗೋಲಿಯು ಚೂಪಾದ ಮುಳ್ಳಿನಂತಹ ಕದರ (ತೆನೆ)ವನ್ನು ಹೊಂದಿರುತ್ತದೆ. ಇದು ಅಂಬು ಅಂದರೆ ಬಾಣದಂತಹ ತೆನೆಯುಳ್ಳ ಒಂದು ಬಗೆಯ ಕೋಲಿ ಎಂದು ನಾವು ಶಬ್ದದ ಸಮಾಸ ಬಿಡಿಸುವತ್ತ ಗಮನ ಹರಿಸಿದರೆ, ಸುಕ್ರಿ ಇದು ಸಾಮಾನ್ಯ ಹುಲ್ಲಲ್ಲ, ಹೆಂಗಸರ ಸೀರೆಗೆ, ಗಂಡಸರ ಕಚ್ಚೆಪಂಚೆಗೆ ತಾನು ಚುಚ್ಚಿಕೊಂಡು ಅವರ ಜೊತೆ ಕಾಡೆಲ್ಲ ತಿರುಗಿ ಊರಿಗೂ ಬಂದು ಬಿಡುತ್ತದೆ ಎನ್ನುತ್ತ ಅದರ ಚಾರಿತ್ರ್ಯ ಜಾಲಾಡಿ ಬಿಡುತ್ತಾರೆ. ಬಣ್ಣ ಉಟ್ಟವರ ಬಿಡ; ಚೆನ್ನ ತೊಟ್ಟವರ ಬಿಡ ಈ ಅಂಬುಗೋಲಿ ಎಂದು ಪ್ರಾರಂಭಿಸಿ ಅದರ ಪ್ರಕ್ರಿಯೆಯನ್ನು ಹಾಡಿನಲ್ಲಿಯು ಕಟ್ಟಿಕೊಡುತ್ತಾರೆ. ಮನೆಹೊದಿಕೆಗಾಗಿ

ಇದನ್ನು ಸಂಗ್ರಹಿಸುವುದಾದಲ್ಲಿ ತುಳಸಿ ಹಬ್ಬ (ಕಾರ್ತಿಕಮಾಸ) ಕಳಿಯಬೇಕು. ಆಗ ಇದು ತನ್ನ ಅಂಬನ್ನು ಉದುರಿಸುತ್ತದೆ. ದನಕ್ಕೆ ಮೇವಾಗಿ ಕಳಿಸುವವರು ಇದನ್ನು ಮೊದಲೇ ಕೊಯ್ದು ಸಂಗ್ರಹಿಸಬೇಕು ಎನ್ನುತ್ತಾರೆ. ಹೀಗೆ ಸಾಗುತ್ತದೆ ಅನೇಕ ಕಿರು ಸಸ್ಯಗಳ ಗುಣಗಾನ; ದೊರೆಯುತ್ತದೆ ಪ್ರತ್ಯಕ್ಷ ಜ್ಞಾನ.

ಕರಾವಳಿಯಲ್ಲಿ ಬೆಟ್ಟಗುಡ್ಡಗಳಲ್ಲಿ ಬೆಳೆಯುವ ಇನ್ನೊಂದು ಹುಲ್ಲು ಬೆಳ್ಳಗಿನ ತೆನೆಯುಳ್ಳದ್ದು ಹಂಸಗಳ ತುಪ್ಪಳದಂತೆ ಸುಂದರ; ಮೃದು.

ಗುಬ್ಬಿಹುಲ್ಲು ಆಕಾರದಲ್ಲಿ ಚಿಕ್ಕದು, ತೆನೆಯಲ್ಲಿಯ ಹೂ, ಕಾಳುಗಳು ಕಸಕಸೆಯಂತೆ ಕಾಣುತ್ತದೆ. ಈ ಹುಲ್ಲಿಗೆ ಈ ಹೆಸರು ಬರಲು ಇದರ ಚಿಕ್ಕ ಆಕಾರವಿರಬಹುದೆಂದುಕೊಂಡೆ. ಅದು ಪೂರ್ಣ ಸತ್ಯವಲ್ಲ. ಸುಕ್ರಿ ಗುಬ್ಬಿಗಳು ಈ ಗುಬ್ಬಿ ಹುಲ್ಲಿನಿಂದಲೇ ತಮ್ಮ ಮನೆಕಟ್ಟುತ್ತವೆಯೆಂಬ ಅಪೂರ್ವ ಅನುಭವವನ್ನೊರೆಯುತ್ತಾರೆ.

ಒಮ್ಮೆ ನನ್ನ ಜೊತೆ ಬಯಲಿನಲ್ಲಿ ನಡೆಯುತ್ತಿದ್ದಾಗ ಸುಕ್ರಿ ಒಂದು ಜಾತಿಯ ಹುಲ್ಲಿನ ಉದ್ದದೇಟಿನ ಹತ್ತಾರು ಹೂ ತೆನೆಗಳನ್ನು ಕೊಯ್ದುಕೊಂಡು **ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೆ** ಎಂದು ಮತ್ತೆ ಮತ್ತೆ ಹೇಳತೊಡಗಿದರು, "ಇದೇನು ಒಗಟಾ ಹೇಳು ಮತ್ತೆ ಎನ್ನುತ್ತಾ ನಾನು ಬರೆದುಕೊಳ್ಳಲೆಂದು ಪೆನ್ನೆತ್ತಿಕೊಂಡರೆ ಸುಕ್ರಿ ಮತ್ತೆ ಅದೇ ಹಾಡು "ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೇ" ಎಂದು ಹೇಳುತ್ತ ನನ್ನ ಮುಖ ನೋಡಿ ನಗುವರು. ಆಗ ನನ್ನ ತಲೆಯ ಟ್ಯೂಬ್‌ಲೈಟ್ ಹೊತ್ತಿಕೊಳ್ಳುತ್ತದೆ. ಈ ಹುಲ್ಲಿಗೆ ಇಷ್ಟುದ್ದದ ಇಂಥಾ ಹೆಸರಾ? ಎಂದು ಪ್ರಶ್ನಿಸುತ್ತೇನೆ. ಹೌದು ಇದಕ್ಕೆ ಇಷ್ಟು ಉದ್ದದ ಹೆಸರಿದೆ ಎಂದು ತಿಳಿಸಿ, ಹೆಸರನ್ನು ಒಂದೊಂದಾಗಿ ವಿವರಿಸಿ ಹೇಳುತ್ತಾರೆ.

ಈ ಜಾನಪದ ಸಸ್ಯಶಾಸ್ತ್ರಜ್ಞೆ ಪ್ರತಿ ಹುಲ್ಲಿನ ಹೂ ತೆನೆ ನೋಡಿ ಸಸ್ಯಪ್ರಭೇದ ಗುರುತಿಸುವ ರೀತಿಗೆ ಬೆರಗುಗೊಳ್ಳುತ್ತೇನೆ. ಹುಲ್ಲು ತೆನೆ ಬಿಡುವ ಮೊದಲೇ ಅವುಗಳ ಪ್ರಭೇದ ಗುರುತಿಸುವ ಅಪೂರ್ವ ಜ್ಞಾನವೂ ಇವರಿಗಿದೆ. ಸುಕ್ರಿ ಬಲ್ಲ ಹುಲ್ಲುಗಳ ಪ್ರಪಂಚವೊಂದನ್ನೇ ಆರಿಸಿಕೊಂಡು ಅದನ್ನು ಅಕ್ಷರಕ್ಕಿಳಿಸಿದರೂ

ಸಾವಿರ ಪುಟದ ಹೊತ್ತಿಗೆ ಸಿದ್ಧವಾಗುವುದು ಸಾಧ್ಯವಿದೆ. ಅದು ಜನಪದ ಸಸ್ಯಜ್ಞಾನ ಪ್ರಪಂಚಕ್ಕೆ ಕನ್ನಡ ಸಸ್ಯನಾಮ ಭಂಡಾರಕ್ಕೆ ಬಹುದೊಡ್ಡ ನಿಧಿಯಾಗಬಹುದು.

ಕಾಡಿನ ಆಹಾರ ಸಸ್ಯಜ್ಞಾನ

ಇವರ ಕಾಡಿನ ಆಹಾರ ಬೆಳೆಯ ಜ್ಞಾನವಂತೂ ಅದ್ಭುತ. ಪರಿಮಳಭರಿತ ಪಾನೀಯ ನೀಡುವ ಬಂದಾರೆ ಸೊಪ್ಪು, ಮಸೆ ಸೊಪ್ಪು, ದೋಸೆ ಮಾಡಲು ಬಳಸುವ ಕಾಲಿಗೆಂಡೆ ಸಿಹಿ ಗೆಣಸಿನಂತೆ ಕುದಿಸಿ ತಿನ್ನಬಹುದಾದ ಜಾವಳಿ ಗೆಂಡೆ ಬಹು ರುಚಿಯಾದ ಪಲ್ಯಕ್ಕೆ ಒದಗುವ ಮಚಲೆ ಸೊಪ್ಪು ಇತ್ಯಾದಿ. ಏರುತ್ತಿರುವ ಭೂಮಿಯ ಉಷ್ಣತೆಯ ಕಾರಣದಿಂದ ನಾಡಿನ ಆಹಾರ, ಸಸ್ಯಗಳು ನಾಶದ ಹಂತ ತಲುಪಿದಾಗ ಪಶ್ಚಿಮ ಘಟ್ಟದ ತಂಪಿನಲ್ಲಿ ಈ ಆಹಾರ ಬೆಳೆಗಳಾದ ಜಾಬಲಿಗೆಂಡೆ, ಪಿನ್ನಿಗೆಂಡೆ, ಕಾವಲಿಗೆಂಡೆ, ಮುರಸಲಗೆಂಡೆ, ತೆರ್ಲಕಾಯಿ, ದುರಕಲು, ನೆಪ್ಪಿನಬಳ್ಳಿ, ನುರಕುಲು, ಪೆಪೆ, ಬಂಗಡೆ, ಬಂದಾರೆ, ಮಚಲೆ, ಬೊಬ್ಬೆಗಳು ಪ್ರಯೋಜನಕ್ಕೆ ಬರಬಹುದು. ಇವುಗಳನ್ನು ಹುಡುಕಿಕೊಂಡು ಹೋಗುವ ಕಾಲ ಬರಬಹುದು. ಆದರೆ ಆವರೆಗೆ ಸುಕ್ರಿಯ ಈ ಜ್ಞಾನ ಮರೆಯಾಗಿರುತ್ತದೆ ಯೆಂಬುದು ಕಟು ಸತ್ಯ.

ಉರುವಲು ಕಟ್ಟಿಗೆ ಜ್ಞಾನಿ

ಇವರು ಉರುವಲು ಕಟ್ಟಿಗೆ ಮಾರಿ ಜೀವನ ಮಾಡುವ ವೃತ್ತಿಯನ್ನು ಹೊಂದಿದ ಜನ ಸಮುದಾಯಕ್ಕೆ ಸೇರಿದವರು. ಆದ್ದರಿಂದ ಇವರು ಉರುವಲು ಕಟ್ಟಿಗೆ ಜಾನಪದವನ್ನು ಚೆನ್ನಾಗಿ ಬಲ್ಲರು. ಅರಣ್ಯ ಕಾಯ್ದೆಗಳ ಕಾರಣ ಇತ್ತೀಚೆಗೆ ಹೊಸಪೀಳಿಗೆಯಲ್ಲಿ ಉರವಲು ಕಟ್ಟಿಗೆಯ ಜಾನಪದವನ್ನು ಬಲ್ಲವರು ವಿರಳವಾಗಿದ್ದಾರೆ. ಸುಕ್ರಿಯವರ ಅಭಿಪ್ರಾಯದಂತೆ **ಕಾರೆ ಹಂಚೋಳಿ** ಗುರಾಣಿ ಕಟ್ಟಿಗೆಯು ಅಡುಗೆ ಒಲೆಗೆ ಉತ್ತಮ. **ಸಾಗವಾನಿ, ನಂದಿ, ಜಂಬೆ, ಕರ್ಕಿಜಂಬೆ, ಹುನಗಲು** ಮುಂತಾದ ಮರಗಳ ಕಟ್ಟಿಗೆಯೂ ಕಚ್ಚುವದಕ್ಕೆ ಉತ್ತಮ. ಆದರೆ ಈ ಕಟ್ಟಿಗೆ ಈಗ ದೊರೆಯುವುದಿಲ್ಲ. **ನೆಡತಿಗೆ ಕಾಸನ** ಬೊನಗೆರೆ ಕಟ್ಟಿಗೆಯನ್ನು ಮನೆಯೊಳಗೆ ಉರಿಸಬಾರದೆನ್ನುತ್ತಾರೆ.

ನಾಡವೈದ್ಯೆ

ಇವರೊಬ್ಬ ನಾಡವೈದ್ಯರೂ ಅಹುದು. ಮೂಲವ್ಯಾಧಿ, ಅರಿಶಿನ ಗುಂಡಗೆ, ಬಂಜೆತನಗಳಿಗೆ ಉತ್ತಮ ಔಷಧ ನೀಡಬಲ್ಲರು. ಅಪಾರ ಸಂಖ್ಯೆಯ ಔಷಧ ಸಸ್ಯಗಳ ಬಗ್ಗೆ ಇವರಿಗೆ ಅಪಾರ ಜ್ಞಾನವಿದೆ. ಬದೀಗೆಂಡೆ, ತಂಡ್ಸಳ್ಳಿ, ಮೂಲಾಧಿಗೆಂಡೆ, ಕಾಕಿಹಣ್ಣಿನ ಸೊಪ್ಪು ಗರಗ ಗವಟೆ ಇತ್ಯಾದಿ ನೂರಾರು ಔಷಧ ಸಸ್ಯಗಳನ್ನು ಇವರು ಬಲ್ಲರು. ಜನರ ಮಾನಸಿಕ ನೆಮ್ಮದಿಗಾಗಿ ಜನಪದ ವೈದ್ಯ ಪದ್ಧತಿಯ ಒಂದು ಅಂಗವಾದ 'ದೆವ್ವ ಕಡಿಯುವ' ತಂತ್ರವನ್ನು ವಿರಳವಾಗಿ ಇವರು ನಡೆಸಿದ್ದುಂಟು.

ಸುಕ್ರಿ ಬೆಟ್ಟದ ಸೆರಗಿನ ನಾಡಿನಲ್ಲಿ ಈಗ ವಾಸವಾಗಿದ್ದರೂ, ಬಾಲ್ಯದಿಂದಲೇ ಇವರಿಗೆ ಕಾಡಿನೊಂದಿಗೆ ನಿತ್ಯ ನಿರಂತರ ಸಂಬಂಧ. ಪೂರ್ವದಲ್ಲಿ ಬೆಳಗಾಗುವ ಹಲವು ತಾಸು ಮುನ್ನವೇ ಇವರು ತನ್ನ ಜೊತೆಗಾರರ ಜೊತೆ ಕಾಡಿಗೆ ಹೊರಟರೆ ತಿರುಗಿ ಬರುವುದು ಹೊತ್ತು ಪಶ್ಚಿಮಕ್ಕೆ ತಿರುಗುವ ಸಮಯದಲ್ಲಿ. ಬಿತ್ತನೆ ಸಂದರ್ಭದಲ್ಲಿ ಕಾಡಿನಲ್ಲಿಯೇ ಸಂಜೆಯನ್ನು ಕಳೆಯವುದೂ ಉಂಟು. ಇವರ ಪೂರ್ವಜರು ಕಾಡಿನಲ್ಲಿ ನೆಲೆಸಿ ಪಡೆದ ಅನುಭವವೂ ಪರಂಪರಾಗತವಾಗಿ ಇವರ ಬಳಿಗೆ ಬಂದಿದೆ. ಇವರು ಇದನ್ನು ಬಿಟ್ಟು ಬಿಸಾಡದೆ ಹಿಡಿದಿಟ್ಟುಕೊಂಡಿದ್ದಾರೆ. ಇದು ಇವರ ವಿಶೇಷ ಗುಣ.

ಜನಪದ ಸಾಹಿತ್ಯದಲ್ಲಿ ಪ್ರಕೃತಿ

ಇವರು ಒರೆಯುವ ಜನಪದ ಸಾಹಿತ್ಯದಲ್ಲಿ ಪ್ರಕೃತಿಯ ಪಾತ್ರ ಹಿರಿದು. ಜನಪದ ರಾಮಾಯಣ ಮಹಾಭಾರತಗಳಂತಹ ಕಾವ್ಯಗಳಲ್ಲಿಯೂ ಕಾಡಿನ ಸಸ್ಯಗಳು ಪ್ರಾಣಿಗಳು ಹಕ್ಕಿಗಳು ಪಾತ್ರವಹಿಸುತ್ತವೆ.

ಸುಕ್ರಿ ಉಳಿಸಿಕೊಂಡು ಬಂದಿರುವ ಪರಂಪರಾಗತ ಜ್ಞಾನದ ಪ್ರಕಾರ ನಾಡಿನಲ್ಲಿ ಕಾಣುವ ಅನೇಕ ಸಸ್ಯ, ಪ್ರಾಣಿ, ಪಕ್ಷಿಗಳು ಕಾಡಿನಲ್ಲಿಯೂ ಇವೆ. ಅವೆಲ್ಲವೂ ಪಾಡವರು ವನವಾಸಕ್ಕೆ ತೆರಳಿದಾಗ ಅವರ ಜೊತೆ ಹೊರಟ ಪ್ರಕೃತಿಯ ಚರಾಚರ ಜೀವಿಗಳು ಎನ್ನುತ್ತಾರೆ. ಕಾಡುಬೆಕ್ಕು, ಕಾಡುನಾಯಿ,

ಕಾಡುಕೋಳಿ, ಕಾಡುಬಾಳೆ, ಕಾಡರಶಿನ, ಕಾಡುಕಂಚಿ, ಕಾಡುಗೊಣ್ಣೆ ಹೀಗೆ ನೂರಾರು ಚರಾಚರಗಳ ಹೆಸರುಗಳನ್ನು ಉದಾಹರಿಸುತ್ತಾರೆ. ಇವು ಪಾಂಡವರು ವನವಾಸಕ್ಕೆ ಹೋಗುವುದನ್ನು ಒಪ್ಪದೆ ಅವರ ಜೊತೆ ನಾಡಿನಿಂದ ಕಾಡಿಗೆ ಹೋಗಿ ಅಲ್ಲಿಯೇ ಉಳಿದುಬಿಟ್ಟವು ಎನ್ನುತ್ತಾರೆ.

ಪಾಂಡೋರ ಪಚ್ಚೆ : ಎಂಬುದು ಒಂದು ಚಿಕ್ಕ ನೀರು ಸಸ್ಯ. ಶ್ರಾವಣದಲ್ಲಿ ಬಾಗಿಲ ಪೂಜೆಗೆ ಬಳಸುವ 'ಸೋಣೆಕುಡಿ' (ಶ್ರಾವಣದ ಕುಡಿ) ಎಂಬ ಕರ್ಣಕುಂಡಲ (ಗೌರಿಹೂ) ಹೂವಿನ ಗಿಡದ ಜಾತಿಗೆ ಸೇರಿದ್ದು. ಈ ಗಿಡ ಮತ್ತು ಪಾಂಡವರ ನಡುವೆ ನಡೆದ ಒಂದು ಸಂಭಾಷಣೆಯನ್ನು ಸುಕ್ರಿಯ ಹಾಡಿನಲ್ಲಿಯೇ ಕೇಳುವದೊಂದು ಸೊಗಸು. ಆ ಹಾಡನ್ನು ಇಲ್ಲಿ ಅಕ್ಷರಗಳಲ್ಲಿಡಲಾಗಿದೆ.

ಕಂಚನ ಕೆಂಟೆ (ಗೆಂಟೆ) ಕೈಲೋರೆ ಬೆಳ್ಳಿ ಕೆಂಟೆ (ಗೆಂಟೆ) ಪಾಂಡೋರೆ
ತಾಮಾಲೇ ಹೊರ ಚೇರೆ ನೆಡದಾರೇ
ತಾಮಾಲೇ ಹೊರ ಚೇರೆ ನೆಡದಾರೇ ಪಾಂಡೋರೆ
ತಿರಗಲೆ ನೋಡುತೆಲಯದಾರೆ
ತಿರಗಲೆ ನೋಡುತೆಲಯದಾರೆ ಪಾಂಡೋರೆ
ತಾಮ್ ನೆಟ್ಟಾ ಪಚ್ಚೆ ತಮ್ ಬೆನ್ನೀಗೆ
ತಾಮ್ ನೆಟ್ಟಾ ಪಚ್ಚೆ ತಮ್ ಬೆನ್ನೀಗೆ ಬತ್ತೀದಂದೆ
ಬೆಟ್ಟದಾ ಪಚ್ಚೆಯಾಗಿ ವಳಿಯಂದ್ರು.

ಹೀಗೆ ಪಾಂಡವರಿಗೂ ಅನೇಕ ಸಸ್ಯ ಸಂಕುಲಕ್ಕೂ ಇರುವ ಸಂಬಂಧವನ್ನು ನಿರಂತರವಾಗಿ ಹಾಡುತ್ತಾರೆ. ಈ ಹಾಡುಗಳಲ್ಲಿ ಪಾಂಡವರು ವನವಾಸಕ್ಕೆ ಹೊರಟಾಗ ಪಾಂಡವರ ಮೇಲಿನ ಪ್ರೀತಿಯಿಂದಾಗಿ ನಾಡಿನ ಸಸ್ಯ ಸಂಕುಲಗಳು, ಪಾಂಡವರ ಜೊತೆ ಕಾಡಿಗೆ ನಡೆದವು. ಪಾಂಡವರು ಮೊಡಹಾಗಲ, ಕಲ್ಲುಬಾಳೆ, ಹರಗಿ ಮುಂತಾದವುಗಳನ್ನು ಬಿತ್ತುತ್ತ ಸಾಗಿದರು. ಆದ್ದರಿಂದ ಕಾಡಿನ ಅನೇಕ ಸಸ್ಯಗಳಿಗೆ ಪಾಂಡವರು ಎಂಬ ವಿಶೇಷಣ ಸೇರಿಕೊಂಡಿರುತ್ತದೆ. ಉದಾ :

ಪಾಂಡವರ ಹರಿಗೆ, ಪಾಂಡವರ ತುಳಸಿ, ಪಾಂಡವರ ಪಚ್ಚೆ ಇತ್ಯಾದಿ. ಸುಕ್ರಿಯ ಹಾಡಿನಲ್ಲಿ ಬರುವ ಪಾಂಡವರು ಅಪ್ಪಟ ಶ್ರಮಿಕ ರೈತರು. ಪಾಂಡವರು ಅರೆ (ಕಲ್ಲು)ಯ ಮೇಲೆ ಕೆರೆಯನ್ನು ಕಡೆದು ನೀರನ್ನು ಹರಿಸಿ ಜೀವಿಗಳಿಗೆ ಉಪಕಾರ ಮಾಡಿದರು. ಬಾವಿಯನ್ನು ತೋಡಿ ಬಾಳೆಯನ್ನು ನೆಟ್ಟರು ಎನ್ನುತ್ತ ಸುಕ್ರಿ ಅವರ ಇಂತಹ ಕೃಷಿಕಾರ್ಯದ ಬಗ್ಗೆ ಅಭಿಮಾನ ತಾಳುತ್ತಾರೆ.

ಹಾಲಕ್ಕಿ ಒಕ್ಕಲು ಕೂಡ ತಾವು ಪಾಂಡವರ ಕುಲದವರು ಎಂದು ಒತ್ತಿ ಹೇಳುತ್ತಾರೆ. ಹಾಲಕ್ಕಿ ಒಕ್ಕಲು ಸಂಬಂಧಿಕರಲ್ಲದ ತಮ್ಮ ಜಾತಿಯ ಹೊಸಬರನ್ನು ಭೆಟ್ಟಿಯಾದಾಗ ಅವರನ್ನು 'ಭಾವ' ಎಂದು ಸಂಬೋಧಿಸುವುದುಂಟು. ಇಲ್ಲಿ ಇವು ತಮ್ಮನ್ನು ಪಾಂಡವರಿಗೂ ಹೊಸಬರನ್ನು ಸಾಕ್ಷಾತ್ ಕೃಷ್ಣನಿಗೂ ಹೋಲಿಸಿಕೊಳ್ಳುತ್ತಾರೆ. ಕೃಷ್ಣ ಪಾಂಡವರ ಭಾವ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸುಕ್ರಿ ತಾನು ಹಾಡಿದ್ದನ್ನು ಗದ್ಯದಲ್ಲಿ ವಿವರಿಸುವ ಶಕ್ತಿಯನ್ನೂ ಹೊಂದಿದ್ದಾರೆ. ಮದುವೆ ಹಾಡು, ತೊಟ್ಟಿಲು ತುಂಬುವ ಹಾಡು ಮುಂತಾದ ಜೀವನಾವರ್ತನಕ್ಕೆ ಸಂಬಂಧಿಸಿದ ಅಪಾರ ಸಂಖ್ಯೆಯ ಹಾಡುಗಳನ್ನು ಮತ್ತು ಆಯಾ ಆಚರಣೆಯ ವಿಧಾನಗಳನ್ನು ಇವರು ಬಲ್ಲರು. ಇವಲ್ಲದೆ ಇವರು ವಾರ್ಷಿಕಾವರ್ತನಕ್ಕೆ ಸಂಬಂಧಿಸಿದ ಗೀತಗಳನ್ನು ಪುರಾಣ ಕಥೆಗಳನ್ನು ಬಲ್ಲರು.

ಮಹಾಭಾರತ :

ಸುಕ್ರಿಯವರ ರಾಮಾಯಣ ಮಹಾಭಾರತಗಳ ಕಥನಪರ ನಿರೂಪಣೆಯಲ್ಲಾಗಲಿ ಗದ್ಯರೂಪದಲ್ಲಿ ತಿಳಿಸುವ ಕತೆಗಳ ವಿಶ್ಲೇಷಣೆಯಲ್ಲಾಗಲಿ ಹೊಸ ವಿಷಯ ವಸ್ತುವಿರುತ್ತದೆ. ಜೊತೆಗೆ ನಿಸರ್ಗವೇ ಮೈವೆತ್ತು ನಿಲ್ಲುತ್ತದೆ. ಪಾಂಡವರು ಕೌರವರು ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಕಂಡುಬರುವ ದಾಯಾದಿ ಸಂಬಂಧಿಕರಲ್ಲ. ಅವರು ಒಬ್ಬಳೇ ತಾಯಿ ಹೊಟ್ಟೆಯಲ್ಲಿ ಹುಟ್ಟಿದ ಅಕ್ಕ ತಂಗಿಯರ ಮಕ್ಕಳು. ಅಂದರೆ ಗಾಂಧಾರಿ, ಕುಂತಿ ಒಂದೇ ತಾಯಿ ಮಕ್ಕಳು. ಇವರು ಮಾತೃ ಮೂಲೀಯ ಬಳಿ ಪದ್ಧತಿಯ ಅಕ್ಕ ತಂಗಿಯರು.

ಸುಕ್ರಿಯು ಒರೆಯುವ ಮಹಾಭಾರತದ ಪ್ರಕಾರ ಕುಂತಿಗೆ ಪರಮಾತ್ಮ "ಕಾನಂಬು ಕರ್ಗತ್ಲೆ ಬೋರಂಬು ಹಣಿಮೊಳೆ ಹೊಯ್ಯುತ್ತಿದ್ದ ಒಂದು ದಿನ ನುಸಿ ರೂಪ ತಳೆದು ಕುಂತಿಯ ಮೂಗಿನ ಮೂಲಕ ಒಳಹೊಕ್ಕು ಅವಳಿಗೆ ಭೋಗ ಕೊಟ್ಟ. ಕುಂತಿ ಕಾಡು ಬೆಂಡೆಕಾಯಿ ಕಾಡು ಬಯಣೆಕಾಯಿ ತಿಂದು ತನ್ನ ಬಯಕೆ ತೀರಿಸಿಕೊಂಡಳು. ಕರ್ಣ ಹುಟ್ಟಿದ್ದು ಅವಳ ಕಿವಿಯ ಮೂಲಕ ಅವನೇ ಕರ್ಣ. ಕುಂತಿ ಗಂಡನಿಲ್ಲದೆ ಗಂಡು ಕುಮಾರನನ್ನು ಹಡೆದಾಗ ಅದನ್ನು ಅವಳು ಗಂಗೆಗೆ ಚೆಲ್ಲಲಿಲ್ಲ. ತನ್ನ ಸಹೋದರಿ ಗಾಂಧಾರಿಗೆ ಕೊಟ್ಟಳು. ಆದ್ದರಿಂದ ಗಾಂಧಾರಿ ನೂರೊಂದು ಮಕ್ಕಳ ತಾಯಿಯಾದಳು. ಮಮತೆಯಿಂದ ಕರ್ಣನನ್ನು ಸಲಹಿದಳು.

ಭೀಮ ಕೆಂದಾಳಿ (ಕೆಂಪು ಅಳ್ಳಿ) ಹೂವಿನ ಕತೆಯ ಹಾಡಿನಲ್ಲಿ ಸುಕ್ರಿಯವರ ಹಾಡು ಹುರಿಗೊಳ್ಳುತ್ತವೆ. ಭೀಮ ಚಕಲ, ಚಾದೇವೆ ಕೂಟ ಕೂಡುವ ಹಾಡು, ಪಾಂಡವರ ಪಗಡೆಯಾಟ, ಪಾಂಡವರ ವನವಾಸ ಇತ್ಯಾದಿ ಬಹುದೊಡ್ಡ ಹಾಡುಗಳನ್ನು ಲೀಲಾಜಾಲವಾಗಿ ಹಾಡುತ್ತಾರೆ.

ರಾಮಾಯಣ

ಸುಕ್ರಿಯವರು ಹೇಳುವ ರಾಮಾಯಣದ ಕತೆಯಲ್ಲಿ, ರಾಮನು ಕಾಡಿಗಟ್ಟಿದ ಸೀತೆಗೆ ಆಶ್ರಯ ನೀಡಿದವನು ವಾಲ್ಮೀಕಿಯಲ್ಲ ಅಜ್ಜಾಮುನಿ. ಆತ ಕಣ್ಣು ಕಾಣದವ; ಕುರುಡ. ಅಜ್ಜಾಮುನಿಯ ಗುಡಿಸಲಲ್ಲಿ ನಡೆದ ಒಂದು ಸಂದರ್ಭ ಹೀಗಿದೆ. ಒಮ್ಮೆ ಸೀತೆ ತನ್ನ ಮಗುವನ್ನು ಈ ಅಜ್ಜಾಮುನಿಯ ಬಳಿ ಬಿಟ್ಟು ಬಟ್ಟೆ ಒಗೆಯಲೆಂದು ಹಳ್ಳ (ತೊರೆ)ಕ್ಕೆ ಬರುತ್ತಾಳೆ. ಅಲ್ಲಿ ಮರಿ ಮಂಗಗಳು ತಮ್ಮ ತಾಯಿಯ ಎದೆಗವಚಿಕೊಂಡಿದ್ದವು. ಮರಿಗಳು ಎದೆಗವುಚಿಕೊಂಡಿರುವಾಗಲೇ ತಾಯಿ ಮಂಗ ಆ ಮರ ಈ ಮರ ಹಾರುತ್ತಿದ್ದವು. ಇದನ್ನು ಕಂಡ ಸೀತೆ, ಬುದ್ಧಿಯಿಲ್ಲದ ಮಂಗಗಳೆ ನೀವು ಈ ರೀತಿ ಅತ್ತಿಂದಿತ್ತ ಹಾರುತ್ತಿದ್ದೀರಿ, ಮರಿಗಳು ತಪ್ಪಿ ಕೆಳಗೆ ಬಿದ್ದರೆ ಏನು ಮಾಡುವಿರಿ ? ಎಂದು ಕೇಳಿದಳು.

ಆಗ ಅವರು ನಮ್ಮನ್ನು ಬುದ್ಧಿ ಇಲ್ಲದವರು ಎನ್ನುತ್ತೀಯಲ್ಲವೆ ನೀನು ಕಣ್ಣು ಕಾಣದವನ ಬಳಿ ಮಗುವನ್ನು ಹೇಗೆ ಬಿಟ್ಟು ಬಂದೆ ನಿನಗೆ ಬುದ್ಧಿ

ಬೇಡವೆ ? ಅಡವಿಯ ಪ್ರಾಣಿಗಳು ಬಂದು ಮಗುವನ್ನೆತ್ತಿಕೊಂಡು ಹೋದರೆ ಏನು ಮಾಡುವೆ ? ಎಂದವು. ಸೀತೆ ಹೆದರಿದಳು. ಅವಳಿಗೆ ತನ್ನ ತಪ್ಪಿನ ಅರಿವಾಯಿತು. ಗುಡಿಸಲಿಗೆ ಹೋಗಿ ತನ್ನ ಮಗುವನ್ನೆತ್ತಿ ತಂದಳು. ಅಲ್ಲಿಯ ಒಂದು ಮರದ ಕೆಳಗೆ ತನ್ನ ಸೀರೆ ಹಾಸಿ ಅಲ್ಲಿ ಮಗನನ್ನು ಮಲಗಿಸಿ ತನ್ನ ಬಟ್ಟೆ ಒಗೆಯತೊಡಗಿದಳು.

ಮಗು ಬಹಳ ಹೊತ್ತಾದರೂ ಏಳಲಿಲ್ಲ ಏಕೆ ? ಅಳಲಿಲ್ಲ ಏಕೆ ಎಂದುಕೊಂಡ ಅಜ್ಜಾಮುನಿ ಮೆಲ್ಲಗೆ ಮಗು ಮಲಗಿದ ಸ್ಥಳಕ್ಕೆ ಹೋಗಿ ಕೈ ಇಳುಗಿ (ಬಳಸಿ) ನೋಡಿದನು. ಮಗು ಕೈಗೆ ಸಿಗಲಿಲ್ಲ. ಏನೋ ತೊಂದರೆಯಾಗಿದೆ ಕಾಡಿನ ಪ್ರಾಣಿಗಳು ಮಗುವನ್ನೆತ್ತಿಕೊಂಡು ಹೋದವು. ಸ್ವಲ್ಪ ಹೊತ್ತಿನಲ್ಲಿಯೇ ಸೀತೆ ಬರುತ್ತಾಳೆ ಏನು ಉತ್ತರ ಕೊಡಲಿ ? ಎಂದು ಚಿಂತಿಸಿದರು. ಬಳಿಯಲ್ಲಿಯೇ ಇದ್ದ ಹುಲ್ಲನ್ನು ಮಂತ್ರಿಸಿ ಒಂದು ಮಗುವನ್ನು ತಯಾರಿಸಿ ಆ ಸ್ಥಳದಲ್ಲಿ ಮಲಗಿಸಿದನು.

ಸೀತೆ ಗುಡಿಸಲಿಗೆ ಬಂದು ಅಲ್ಲಿ ಇನ್ನೊಂದು ಶಿಶುವನ್ನು ಕಾಣುತ್ತಾಳೆ. ತಾನು ಮಂಗಗಳ ಮಾತು ಕೇಳಿ ಮಗುವನ್ನು ಒಯ್ದ ವಿಷಯವನ್ನು ಅಜ್ಜಾಮುನಿಗೆ ತಿಳಿಸುತ್ತಾಳೆ. ಮಗುವನ್ನು ಕೈ ಆಡಿಸಿ ಹುಡುಕಾಡಿದೆ ಮಗು ಸಿಗಲಿಲ್ಲ. ಆದ್ದರಿಂದ ಹುಲ್ಲನ್ನು ಮಂತ್ರಿಸಿ ಈ ಮಗುವನ್ನು ಸೃಷ್ಟಿಸಿದೆ ಎಂದು ಅಜ್ಜಾಮುನಿ ತಿಳಿಸಿದರು.

ರಾಮಾಯಣದ ಇಂತಹ ವಿಶಿಷ್ಟ ಹಾಗೂ ವಾಲ್ಮೀಕಿ ರಾಮಾಯಣಕ್ಕಿಂತ ಬೇರೆಯಾದ ಸಂದರ್ಭ ಸನ್ನಿವೇಶಗಳು ಸುಕ್ರಿಯವರ ಬಳಿ ಹಾಡಾಗಿ, ಗದ್ಯಕತೆಯಾಗಿ ಹೊರಹೊಮ್ಮುತ್ತವೆ. ಕತೆಯನ್ನು ಹೇಳುವಾಗಿನ ಸುಕ್ರಿಯ ಹುರುಪು, ಕೇಳುಗರಿಗೆ ಇನ್ನಷ್ಟು ಉತ್ಸಾಹ ಮೂಡಿಸುತ್ತವೆ. ಹಾಲಕ್ಕಿ ಒಕ್ಕಲ ಭಾಷೆಯು ಕಥವನ್ನು ಇನ್ನಷ್ಟು ಹುರಿಗೊಳಿಸುತ್ತದೆ. ಜನಪದ ಕಥೆಗಳಲ್ಲಿ ಬರುವ ಏಳು ಸಮುದ್ರದ ಮಾಹಿತಿ ನೀಡುತ್ತ ಕೀಳು ಸಮುದ್ರ ಮೇಲು ಸಮುದ್ರ ಕಟ್ನೀರ ಸಮುದ್ರ, ಸಿಹಿ ಸಮುದ್ರ, ಮದಗದ ಸಮುದ್ರಗಳನ್ನು ಹೆಸರಿಸುತ್ತಾರೆ.

ಮೈಸೂರು ಮಾಕೇಸ

ರಾಮ ಲಕ್ಷ್ಮಣರು ಕೈಕೆಯ ಕಾರಣದಿಂದ ತಮ್ಮ ರಾಜ್ಯವನ್ನು ಬಿಟ್ಟು ವನವಾಸಕ್ಕೆ ಹೊರಟರು. ಕಾಡು ಕಾಡು ಅಲೆಯುತ್ತ ದೊಡ್ಡ ಕಾಡಿಗೆ ಬಂದರು. ರಾಮನಿಗೆ ಆಸರ (ನೀರಡಿಕೆ) ವಾಯಿತು. ಲಕ್ಷ್ಮಣ ನೀರನ್ನು ಹುಡುಕುತ್ತ ಹೊರಟ. ಎತ್ತರವಾದ ಮರಹತ್ತಿ ಸುತ್ತ ನೋಡಿದ. ದೂರದಲ್ಲಿ ಬೆಳ್ಳಕ್ಕಿಗರಿಯಂತೆ ನೀರ ಸೆಲೆ ಕಂಡುಬಂತು. ಲಕ್ಷ್ಮಣ ಆ ಸ್ಥಳವನ್ನು ಮುಟ್ಟಿದ. ಅದು ಜನಕರಾಯನ ಜಪದ ಕೆರೆ. ತಾನು ಅಲ್ಲಿಗೆ ಬಂದ ಕಾರಣವನ್ನು ಜನಕರಾಯನಿಗೆ ತಿಳಿಸಿದ. ತನ್ನ ಎದುರಿಗೆ ನಿಂತವ ದಶರಥರಾಯನ ಮಗ ಲಕ್ಷ್ಮಣ ಎಂದು ಜನಕರಾಯನಿಗೆ ತಿಳಿಯಿತು. ನಿತ್ಯವೂ ತನ್ನ ಜಪಕ್ಕೆ ತೊಂದರೆ ಕೊಡುವ, ಕಾಮಂಡಲ ಕಾಕೆಯಿಂದಾಗಿ ತನಗೆ ಬಂದಿರುವ ಕಷ್ಟವನ್ನು ಅವನ ಬಳಿ ಹೇಳಿದ. ಕಾಮಂಡಲ ಕಾಕೆಯನ್ನು ಹೊಡೆದು ಕೊಟ್ಟರೆ ತನ್ನ ಸಾಕು ಮಗಳು ಸೀತೆಯನ್ನು ಮತ್ತು ತನ್ನ ಅರ್ಧ ರಾಜ್ಯವನ್ನು ಕೊಡುತ್ತೇನೆಂದ. ಲಕ್ಷ್ಮಣ ಅಣ್ಣನಿಗೆ ನೀರನ್ನು ಒಯ್ದು ಕೊಟ್ಟು ಜನಕರಾಯ ಹೇಳಿದ ಸಂಗತಿಯನ್ನು ತಿಳಿಸಿದ. ಅಣ್ಣ ಹೇಳಿದ "ಕಾಮಂಡಲ ಕಾಕೆ ಹೊಡೆಯುವವರ ಬಾಯಲ್ಲಿ ಮೈಸೂರ ಮಾಕೇಶ (ಜೇಡರ ಹುಳ) ಬೆಳದಿರಬೇಕು. 14 ವರ್ಷ ಅನ್ನ ನೀರು ಮುಟ್ಟದವರ ಬಾಯಲ್ಲಿ ಮಯಸೂರ ಮಾಕೇಸ ಬೆಳೆಯುತ್ತದೆ. ಅಂಥವರು ಮಾತ್ರ ಈ ಕಾಕೆಯನ್ನು ಹೊಡೆಯಬಲ್ಲರು. ನಾವು ಕಂಡ ಕಂಡಲ್ಲಿ ನೀರು ಕುಡಿದಿದ್ದೇವೆ. ಹಣ್ಣು ತಿಂದಿದ್ದೇವೆ. ನಮಗೆ ಇದು ಸಾಧ್ಯವಿಲ್ಲ. ಎಂದ. ಆಗ ಲಕ್ಷ್ಮಣ ತನ್ನ ಬಾಯಿ ತೆರೆದು ತೋರಿದ. ರಾಮನಿಗೆ ತನ್ನ ತಮ್ಮ ಕಾಮಂಡಲ ಕಾಕೆಯನ್ನು ಹೊಡೆಯಲು ತಕ್ಕವನೆಂದು ತಿಳಿಯಿತು. ಲಕ್ಷ್ಮಣ ಕಾಮಂಡಲ ಕಾಕೆಯನ್ನು ಹೊಡೆದು ಸೀತೆಯನ್ನು ಬಹುಮಾನವಾಗಿ ಪಡೆದನು. ಲಕ್ಷ್ಮಣನ ಹೇಳಿಕೆಯಂತೆ ಜನಕರಾಯ ಸೀತೆಯನ್ನು ರಾಮನಿಗೆ ಮದುವೆ ಮಾಡಿಕೊಟ್ಟನು.

ಸುಕ್ರಿಯ ರಾಮಾಯಣದಂತೆ ಸೀತೆಯು ರಾಮ ಲಕ್ಷ್ಮಣರ ಜೊತೆ ಕಾಡಿಗೆ ಹೊರಟವಳಲ್ಲ; ಇವರು ಕಾಡಿನಲ್ಲಿರುವಾಗ ದೊರೆತವಳು.

ತಾರ್ಲೆ ಕುಣಿತ

ಇದು ಪ್ರಮುಖವಾಗಿ ಅಂಕೋಲಾ ತಾಲ್ಲೂಕಿನ ಅಂಬಾರ ಕೂಡಲು, ಬೆಳಬಾರ, ಸಿರಕುಳಿ, ಬೆಳಸೆ, ಕಂತ್ರಿ ಮುಂತಾದ ಅನೇಕ ಊರುಗಳ ಹಾಲಕ್ಕಿ ಒಕ್ಕಲ ಮಹಿಳೆಯರಲ್ಲಿ ಪರಂಪರಾಗತವಾಗಿ ರೂಢಿಯಲ್ಲಿರುವ ಒಂದು ನೃತ್ಯ ಪ್ರಕಾರ. ಇದಕ್ಕೆ ಇನ್ನೊಂದು ಹೆಸರು ದುಮ್ಸಾಲೆ. ಈ ಕುಣಿತಕ್ಕೆ ಸಂಬಂಧಿಸಿದ ಕಥನಪರ ಹಾಡಿನಲ್ಲಿ ಪ್ರತಿ ಸಾಲಿನ ಕೊನೆಯಲ್ಲಿಯ ತಾರ್ಲೆ ಎಂಬ ಶಬ್ದವನ್ನು ಕುಣಿತದವರೆಲ್ಲರೂ ಒಟ್ಟಾಗಿ ಹೇಳುತ್ತಾರೆ. ಆದ್ದರಿಂದ ಈ ಕುಣಿತಕ್ಕೆ ತಾರ್ಲೆ ಎಂಬ ಹೆಸರು ಬಂದಿದೆ.

ಸುಕ್ರಿ ಚಿಕ್ಕವಳಿರುವಾಗ ಸಿರಕುಲಿಯಲ್ಲಿ ತಾರ್ಲೆ ಕುಣಿತ ಜೋರಾಗಿಯೇ ಇತ್ತು. ಶ್ರಾವಣ ಮಾಸದ ಸೋಮವಾರ ಶನಿವಾರ ಹಬ್ಬದ ಪಾಯಸ ಉಂಡು ಅಥವಾ ಇತರ ಹಬ್ಬ ಹುಣ್ಣಿಮೆಗಳಲ್ಲಿ ಎಲ್ಲರೂ ಸಂತೋಷದಿಂದಿರುವಾಗ ಹಗಲಿನಲ್ಲಿ ಹೆಂಗಸರು ಮಕ್ಕಳು ತಾರ್ಲೆ ಕುಣಿಯುತ್ತಿದ್ದರು. ಮಕ್ಕಳು ಕಲಿಯುತ್ತಿದ್ದರು. ಈ ಕುಣಿತವನ್ನು ಸಾಮಾನ್ಯವಾಗಿ ಎಪ್ರಿಲ್ ಮೇ ತಿಂಗಳಲ್ಲಿ ಗದ್ದೆ ಬಿತ್ತುವಾಗ ಹಾಗೂ ಶ್ರಾವಣದ ಶನಿವಾರ ಸೋಮವಾರ ಮತ್ತು ಇತರ ಹಬ್ಬದ ಸಂದರ್ಭಗಳಲ್ಲಿ ಹೆಂಗಸರು ಹಾಡುತ್ತ ಕುಣಿಯುತ್ತಾರೆ. ಗೊಬ್ಬರ ಹಾಕಿ ಹಾಳೆ ಕೊಚ್ಚಿ ಹೂಡಿ ಬೀಜ ಬಿತ್ತಲು ಅಣಿ ಮಾಡಿ ಕೊಂಡಿರುವಾಗ ಮಳೆರಾಯ ಬೆದೆ ಬಂದ ಭೂಮಿಗೆ ನೀರು ಹನಿಸದೆ ಮೋಡಗಟ್ಟಿ ಮುನಿಸಿನಲ್ಲಿರುತ್ತಾನೆ. ಆಗ ಮಳೆರಾಯನನ್ನು ಒಲಿಸಿ ಕೊಳ್ಳಲು ಆಯಾ ಊರಿನ ಹೆಂಗಸರು ಪುರಸೊತ್ತು ಆದ ದಿನ ತಮ್ಮೊಳಗೆ ಮಾತಾಡಿಕೊಂಡು ಕತ್ತಲೆಯಾದ ಬಳಿಕ ಬಯಲಿಗಿಳಿ ಯುತ್ತಾರೆ; ಹಾಡುತ್ತ ಕುಣಿಯುತ್ತಾರೆ.

ಚಣ್ಣಮೊಳೆ ಹೊಯ್ಯಲೆ ಚಣ್ಣ ಕೆರೆ ತುಂಬಲೆ
ಕಯಡಿಗಳೆಲ್ಲ ಹಯನಾಗಲೆ
ದೊಡ್ಡಾ ಮೊಳೆ ಹೊಯ್ಯಾಲೆ ದೊಡ್ಡ ಕೆರೆ ತುಂಬಲೆ
ಗವಿಯಗಳೆಲ್ಲ ಹಯನಾಗಲೆ

ಹೊಯ್ಯೆಹೊಯ್ಯೆ ಮೊಳಿಯೆ ನಮ್ಮೂರಿಗೆ
ನಮ್ಮೂರ ಮಕ್ಕಿ ಕತ್ತಿ ಹೋದೊ
ನಮ್ಮೂರ ಗದ್ದೆ ಸುಟ್ಟಿ ಹೋದೊ
ಹೊಯ್ಯೆ ಹೊಯ್ಯೆ

ಇಂಥ ಹಾಡುಗಳು ಕಾಡಿನ ಜೀವಿಗಳೊಂದಗಿನ ಹಾಲಕ್ಕಿ ಒಕ್ಕಲ ಹಳೆಯ ಸಂಬಂಧಕ್ಕೆ ಸಾಕ್ಷಿಯಾಗಿವೆ. ಕಾಡಿನ ಜೀವಿಗಳಿಗೆ ನೀರಿಲ್ಲ ಮಳೆರಾಯ ಬೇಗ ಬಾ ಮಳೆತಾ ಎಂದು ಹಾರೈಸುವ ಹಾಡೇ ತಾರ್ಲೆ. ಈ ಹಾಡಿನಲ್ಲಿ ಬೆಳತನಕ ಹಾಡಬಲ್ಲ ಸಾಹಿತ್ಯವಿದೆ. ಜನಜೀವನದ ಚಿತ್ರವಿದೆ. ಕೇಳುಗರಿಲ್ಲ ದಾಖಲಿಸುವವರಿಲ್ಲ.

ಬಡಗೇರಿಯಲ್ಲಿ

ಸಿರಕುಳಿಯಿಂದ ಬಡಗೇರಿಗೆ ಹೆಚ್ಚು ದೂರವಿಲ್ಲ. ಕಾಲ್ನಡಿಗೆಯಲ್ಲಿ ಹೊರಟರೆ ಒಂದು ತಾಸಿನ ದಾರಿ ಅಷ್ಟೇ. ಸಿರಕುಲಿಯ ಹನ್ನೆರಡು ವರ್ಷದ ಸುಕ್ರಿ ನಲವತ್ತು ವರ್ಷದ ಬೊಮ್ಮ ಗೌಡನನ್ನು ಮದುವೆಯಾಗಿ ಬಡಗೇರಿಗೆ ಬಂದಳು. ಅಲ್ಲಿಯ ಅವಿಭಕ್ತ ಕುಟುಂಬ ಮನೆಯನ್ನು ಸೇರಿದ ಸುಕ್ರಿ ಭಾವನ ಹೆಂಡತಿಯ ಕೈಕೆಳಗೆ ಗೃಹಿಣಿಯಾಗಿ ದುಡಿದಳು. ಈ ಮನೆ ಅಕ್ಕನೇ ಆ ಕಾಲದ ಕಠಿಣ ಗೃಹಿಣಿ ಶಿಕ್ಷಣವನ್ನು ಸುಕ್ರಿಗೆ ನೀಡಿದ ಗುರು. ಇನ್ನೂ ಮೈನೆರೆಯದ ಈ ಹೆಣ್ಣು ಗಂಡನ ಮನೆಯಲ್ಲಿ ಗಂಡನ ಎದುರು ಓಡಾಡಿದರು ಗಂಡನೊಡನೆ ಮಾತಾಡುವಂತಿರಲಿಲ್ಲ. ಗಂಡ ಅಣ್ಣನ ಹೆಂಡತಿಗೆ ಎದುರಾಡುವಂತಿರಲಿಲ್ಲ. ಹೆಂಡತಿ ಪರವಹಿಸಿ ಮಾತಾಡುವಂತಿರಲಿಲ್ಲ. ಅಂದು ದುಡಿವುದೊಂದೆ ನನ್ನಯ ದರ್ಮ ದುಡಿಸುವುದೊಂದೆ ಅಕ್ಕನ ಕರ್ಮ ಎನ್ನುತ್ತಾ ಸುಕ್ರಿ ಈ ಜೀವನವನ್ನು ಸಹಿಸಿಕೊಂಡಳು.

ಬಡಗೇರಿಗೆ ಮದುವೆಯಾಗಿ ಬಂದ ಸುಕ್ರಿ ಇಲ್ಲಿ ತಾರ್ಲೆ ಕುಣಿತದ ಜೋರು ಹೆಚ್ಚಾಗಿಲ್ಲದಿದ್ದನ್ನು ಗಮನಿಸಿದರು. ಬೆಟ್ಟಕ್ಕೆ ಉರುವಲು ಕಟ್ಟಿಗೆ ತರಲು

ಹೋದ ಮಹಿಳೆಯರು ತಮ್ಮ ಭಾರವಾದ ಉರುವಲು ಕಟ್ಟಿಗೆಯನ್ನು ಕೆಲಕಾಲ ಅಲಗೇರಿ ಸಣ್ಣಮ್ಮ ದೇವಿಯ ಬೋಳೆ ಬಳಿಯ ಎದೆಬೊಳೆ ಎಂಬ ಸ್ಥಳದಲ್ಲಿಯ ಹೊರೆಗಂಬಕ್ಕೆ ಆನಿಸಿ ವಿಶ್ರಮಿಸಿಕೊಳ್ಳುವುದು ಪರಿಪಾಟ. ಅಲ್ಲಿ ಸಾಕಷ್ಟು ಬಯಲಿದೆ. ಕಟ್ಟಿಗೆ ತರಲು ಹೋದ ಈ ಶ್ರಮಜೀವಿಗಳು ಅಲ್ಲಿ ವಿಶ್ರಮಿಸಿಕೊಳ್ಳುವಾಗ ಸುಕ್ರಿ ಅವರನ್ನು ಪುಸಲಾಯಿಸಿ ತಾರ್ಲೆ ಕುಣಿಯಲು ಹಚ್ಚುತ್ತಿದ್ದರು. ಇಂತ ಸಂದರ್ಭಗಳಲ್ಲಿ ಅವಕಾಶ ಸಿಕ್ಕಾಗ ತಾರ್ಲೆ ಕುಣಿಯುವುದಕ್ಕೆ ಹಾಡು ಹೇಳುವುದಕ್ಕೆ ಹುರಿದುಂಬಿಸುತ್ತಿದ್ದರು. ಆದ್ದರಿಂದ ಅಲ್ಲೊಂದು ತಾರ್ಲೆ ಕುಣಿತದ ತಂಡ ಸಿದ್ಧವಾಯಿತು. ಬೇಸಿಗೆಯಲ್ಲಿ ಮಳೆಯಿಲ್ಲದ ಕಾರಣ ಬಿತ್ತುವದು ತಡವಾದಾಗ ತಾರ್ಲೆ ತಂಡದ ಕುಣಿತದ ಜೋರು ಹೆಚ್ಚಾಗುತ್ತಿತ್ತು. ಇವರು ದಣಿಯುತ್ತಿರಲಿಲ್ಲ. ಕಾಲು ನೋವಾಗುವವರೆಗೆ ಕುಣಿಯುತ್ತಿದ್ದರು. ಮಳೆ ಯಾಕೆ ಬರೂದಿಲ್ಲ ನೋಡ್ಯಡ ಬೆತ್ತಲೆ ಕುಣಿಯಿರೇ' ಎಂಬ ಸೊಲ್ಲು ತಂಡದ ನಡುವೆ ಹೊರಡುತ್ತಿತ್ತು. ಬೆದೆಗೆ ಬಂದ ಗದ್ದೆಯಲ್ಲಿ ಸೊಕ್ಕಿನಿಂದ ಕುಣಿಯುತ್ತಿರುವ ತರುಣಿಯರು ಮಳೆರಾಯ ಪ್ರಸನ್ನವಾಗಲಿ ಎಂದು ರಾತ್ರಿಯ ಕತ್ತಲೆಯಲ್ಲಿ ಬೆತ್ತಲೆ ಕುಣಿದರೆ ಪರಾಂಪರಾಗತ ನಂಬಿಕೆ ಇವರನ್ನು ದೋಷಿಗಳೆನ್ನುವದು ಸಾಧ್ಯವಿರಲಿಲ್ಲ.

ಹಾಲಕ್ಕಿ ಮಹಿಳೆಯರು ತುಂಬಾ ಸಂಕೋಚ ಸ್ವಭಾವದವರು. ಇಂಥವರು ಸಾರ್ವಜನಿಕವಾಗಿ ವೇದಿಕೆಯೇರುವುದಕ್ಕೆ ಸುಕ್ರಿಯವರ ಧೈರ್ಯ ಪ್ರೋತ್ಸಾಹಗಳು ಕಾರಣಗಳಾಗಿವೆ. ಇದರಿಂದಾಗಿ ಬಡಗೇರಿ ಊರಿನಲ್ಲಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಮಹಿಳೆಯರು ದೇಶದ ಅನೇಕ ಕಡೆಗಳಲ್ಲಿ ವೇದಿಕೆಯೇರಿ ಸಾರ್ವಜನಿಕರ ಮುಂದೆ ಪ್ರದರ್ಶನ ನೀಡುವುದಕ್ಕೆ ಸಾಧ್ಯವಾಯಿತು.

ಚಳುವಳಿಗಳು

ಒಂದು ಎಕರೆಗೆ ನಾಲ್ಕು ಖಂಡಗ ಅಕ್ಕಿಯನ್ನು ಒಡೆಯನಿಗೆ ಕೊಡಬೇಕು, ಸರಕಾರಕ್ಕೆ ಲೆವಿ ಕೊಡಬೇಕು, ಇದು ಸುಮಾರು 60 ವರ್ಷಗಳ ಹಿಂದಿನ ಸಂಗತಿ. ಸುಕ್ರಿ ಮದುವೆಯಾಗಿ ಬಡಗೇರಿಗೆ ಬಂದಾಗಲು ಈ ಪದ್ಧತಿ

ಬಡಗೇರಿಯಲ್ಲಿತ್ತು. ಆಗ ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಕರ ದೇಸಾಯಿಯವರ ರೈತಪರ ಹೋರಾಟದ ಕಾಲ. ಸರಕಾರಕ್ಕೆ ಲೆವಿ ಹಾಕಬೇಡಿ, ಗುಂಟೆಗೆ ಎಂಟಾಣೆ ಕೊಡಿ ಸಾಕು ಎಂದರು ದೇಸಾಯಿ. ದಿನಕರ ದೇಸಾಯಿಯವರ ರೈತಪರ ಹೋರಾಟ ಬಡ ಹಾಲಕ್ಕಿ ರೈತರ ಸಹಾಯಕ್ಕೆ ಬಂದಿತು. ಹಾಲಕ್ಕಿ ಒಕ್ಕಲಲ್ಲಿ ಗಂಡಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಈ ಹೋರಾಟದಲ್ಲಿ ಪಾಲ್ಗೊಂಡರು. ಸುತ್ತಲಿನ ಹಳ್ಳಿಗಳ ರೈತ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಪಾಲ್ಗೊಂಡರು. ಈ ಚಳುವಳಿಯಲ್ಲಿ ಸುಕ್ರಿ ಗೌಡ್ತಿ ಪಾಲ್ಗೊಂಡಿದ್ದು ಮಹಿಳೆಯರಲ್ಲಿ ಇನ್ನಷ್ಟು ಶಕ್ತಿ ತುಂಬಿತು.

ಅಂಕೋಲೆಯ ಗಾಂಧಿ ಮೈದಾನದಲ್ಲಿ ಅಂಕೋಲೆ ಸುತ್ತಮುತ್ತಲಿನ ಎಲ್ಲ ಜಾತಿಯ ರೈತರು ಸಭೆ ಮಾಡಿದರು. ಲೆವಿ ಬಕಾಸುರನ ಬಹುದೊಡ್ಡ ಗೊಂಬೆ ಮಾಡಿ ಅಲ್ಲಿ ಸುಡುವ ಕಾರ್ಯಕ್ರಮವಿತ್ತು. ಬೆಳಂಬಾರದ ಭೀಮಗೌಡ ತಯಾರಿಸಿದ ಲೆವಿ ಬಕಾಸುರನ ಗೊಂಬೆಯನ್ನು ಅಲ್ಲಿ ಸುಟ್ಟರು. ಹೆಂಗಸರು ಗಂಡಸರು ಹಿಡಿ ಮೊಟ್ಟೆ (ಕಸಬರಿಗೆ) ಹಿಡಿದು ಸರಕಾರಕ್ಕೆ ಧಿಕ್ಕಾರ ಕೂಗಿದರು.

ಸುಕ್ರಿ ರೈತ ಚಳುವಳಿಗಾರರ ಜೊತೆ ಕಾಲ್ನಡಿಗೆಯಲ್ಲಿಯೇ ಕಾರವಾರಕ್ಕೆ ಹೋಗಿ ಚಳುವಳಿ ನಡೆಸಿದರು. ಅಲ್ಲಿ ಊಟದ ವ್ಯವಸ್ಥೆ ಇರಲಿಲ್ಲ. ಊಟಕ್ಕೆ ಚಳುವಳಿಗಾರರೇ ತಮ್ಮ ತಮ್ಮ ಬುತ್ತಿ ಒಯ್ಯಬೇಕಾಗಿತ್ತು. ಸುಕ್ರಿಯವರು ಮುಂದೆ ನಿಂತು ನಡೆಸಿದ ಹಲವಾರು ಚಳುವಳಿಗಳು ರುಚಿ, ಮತ್ತು ಅಗತ್ಯ ಕಂಡ ಮೊದಲ ಅಧ್ಯಾಯವಿದು. ಆ ಬಳಿಕ ಸಮಾಜಕ್ಕೆ ಒಳಿತಾಗುವ ಎಲ್ಲ ಚಳುವಳಿಗಳಲ್ಲಿ ಇವರು ಅಗ್ರ ಪಂಕ್ತಿಯಲ್ಲಿ ನಿಂತರು. ಕೋಟೆಬಾವಿ ಚಳುವಳಿ, ಬುಡಕಟ್ಟು ಜಿಲ್ಲಾ ಚಳುವಳಿ, ಸಾಕ್ಷರತಾ ಆಂದೋಲನ, ಮದ್ಯಪಾನ ವಿರೋಧ ಚಳುವಳಿ ಇತ್ಯಾದಿ ಚಳವಳಿಗಳಲ್ಲಿ ಸುಕ್ರಿಯವರ ಕಲಾ ತಂಡ ಪಾಲ್ಗೊಂಡಿತು.

ಓದು-ಬರಹ ಅರಿಯದವರಾದರೂ ಸಾಮಾಜಿಕ ಕೆಡುಕು ಯಾವುದು ಒಳಿತು ಯಾವುದು ಎಂಬುದರ ಅರಿವುಳ್ಳವರು ಇವರು. ಸಮಾಜಕ್ಕೆ ಒಳಿತಾಗುವ ಚಳವಳಿಗಳಲ್ಲಿ ಭಾಗವಹಿಸಿ ಜೊತೆಯ ಹೋರಾಟಗಾರರಿಗೆ ಪ್ರೋತ್ಸಾಹ

ನೀಡುವಲ್ಲಿ ಸುಕ್ರಿಯದು ಎತ್ತಿದ ಕೈ. ತಮ್ಮ ಕೆಲಸ ಬೊಗಸೆ ಬದಿಗಿಟ್ಟು ನಿತ್ಯದ ಸಾಂಪ್ರದಾಯಿಕ ಬುಡಕಟ್ಟು ಶೈಲಿಯಲ್ಲಿ ಪೋಷಾಕು ಧರಿಸಿದ ಸುಕ್ರಿ ತನ್ನ ಜೊತೆಗಾರ್ತಿಯರೊಂದಿಗೆ ಕೂಡಲೇ ಹೊರಟುಬಿಡುತ್ತಾರೆ.

ಇವರು, ಕೊರಳ ತುಂಬ ಅಂಕೋಲೆಯ ಪರಂಪರಾಗತ ಶೈಲಿಯಲ್ಲಿ ಮಣಿಸರಗಳನ್ನು ಧರಿಸಿ ಅಲ್ಲಿಯ ಹಾಲಕ್ಕಿ ಒಕ್ಕಲ ಗೇಟ್ಗಿ ಶೈಲಿಯಲ್ಲಿ ಸೀರೆಯುಟ್ಟು ಮುಂಚೂಣಿಯಲ್ಲಿದ್ದಾರೆಂದರೆ ಚಳವಳಿಕಾರಿಗೆ ಆನೆಯ ಬಲ ಬರುತ್ತದೆ ಎಂಬುದು ಚಳವಳಿಕಾರರ ಅಭಿಮತ.

ಮದ್ಯಪಾನ ವಿರೋಧಿ ಆಂದೋಲನ

ಸಾಂಕ್ರಾಮಿಕ ಪಿಡುಗಿನಂತೆ ಹಬ್ಬುತ್ತಿದ್ದ ಮದ್ಯಪಾನ ಚಟದ ಕೆಡುಕನ್ನು ಕಣ್ಣಾರೆ ಕಂಡವರು ಇವರು. ಇದು ಹದಿಹರೆಯದವರನ್ನು ಬಿಡದೆ ಅವರ ಬಾಳನ್ನು ನಾಶ ಮಾಡುತ್ತಿದ್ದುದನ್ನು ಕಂಡು ನೊಂದವರು. ಸರಕಾರದ ಮದ್ಯದಂಗಡಿಗಳ ಬಗ್ಗೆ ಹಾಗೂ ಸರಕಾರದ ಅನುಮತಿಯಿಲ್ಲದೆ ಸಾರಾಯಿ ಮಾರಾಟ ಮಾಡುವವರ ವಿರುದ್ಧ ಸಮರವನ್ನೇ ಸಾರಿದ ವೀರ ಮಹಿಳೆ ಇವರು. 1992 ರ ಹೊತ್ತಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಸಾಕ್ಷರತಾ ಆಂದೋಲನ ಪ್ರಾರಂಭವಾಯಿತು. ಅದೇ ಸಂದರ್ಭದಲ್ಲಿ ಇಲ್ಲಿ ಮದ್ಯಪಾನ ವಿರೋಧಿ ಚಳವಳಿ ನಡೆಯಿತು. ಹೊನ್ನಾವರದ ಡಾ. ಕುಸುಮ ನೇತೃತ್ವದಲ್ಲಿ ನವಸಾಕ್ಷರ ಮಹಿಳೆಯರು ಕಾನೂನುಬದ್ಧ ಚಳವಳಿ ಕೈಗೊಂಡರು. ಆದರೂ ಸಾರಾಯಿ ಅಂಗಡಿಯವರ ದೂರಿನಿಂದಾಗಿ ಅಮ್ಮಾಬಾಯಿ, ಕರಿಯಮ್ಮ, ಭುವನೇಶ್ವರಿ ಅಳಗೋಡ ಇವರೆಲ್ಲ ಕುಸುಮ ಸೊರಬರ ನೇತೃತ್ವದಲ್ಲಿ ಜೈಲು ಸೇರಿದರು. ಇವರು ಕಾರವಾರ ಜೈಲಿಗೆ ಕರೆದೊಯ್ಯಲ್ಪಟ್ಟ ಸುದ್ದಿ ತಿಳಿದ ಸುಕ್ರಿ ನೇತೃತ್ವದ ಬಡಗೇರಿಯ ಹಾಲಕ್ಕಿ ಒಕ್ಕಲತಿಯರ ತಾರ್ಲೆ ಕಲಾತಂಡವು ಕಾರವಾರಕ್ಕೆ ಹೋಯಿತು. ಬಡಗೇರಿಯ ಸಣ್ಣು, ಲಿಂಗಾ, ಅಯಿ, ಕರಿಯಾ, ಕುಚಲು, ಮಾನಿ, ಸಣ್ಣು, ಬುದ್ದು, ಲಲಿತಾ, ಶಿವು, ನಾಗಮ್ಮಾ, ಸುಕ್ರು, ಸಣ್ಣು, ಪೇಟು ಮುಂತಾದವವರು ತಂಡದಲ್ಲಿದ್ದರು. ಅಲ್ಲಿ ಕುಸುಮಮ್ಮನವರನ್ನು ಭೆಟ್ಟಿಯಾದ

ತಂಡಗಳು ತಮ್ಮ ತಾಲೂಕಿನ ತಹಶೀಲದಾರ ಕಛೇರಿಯ ಮುಂದೆ ಧರಣಿ ಕುಳಿತವು. ಧರಣಿ ಕುಳಿತವರ ಬಂಧನ ವಿಚಾರಣೆಗಳು ನಡೆಯುವಾಗ ಸುಕ್ರಿ ಆಯಾ ಸ್ಥಳದಲ್ಲಿ ಹಾಜರಿದ್ದು ಚಳವಳಿಗಾರರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಸುಕ್ರಿ ತಮ್ಮ ತಾರ್ಲೆತಂಡದ ಜೊತೆಗಾರ್ತಿಯರೊಂದಿಗೆ ಕುಮಟಾ, ಸಿರ್ಸಿ, ಸಿದ್ಧಾಪುರ, ಕಾರವಾರ ಪಟ್ಟಣಗಳಲ್ಲಿ ಮತ್ತು ಅನೇಕ ಹಳ್ಳಿಗಳಲ್ಲಿ ಮದ್ಯಪಾನ ವಿರೋಧಿ ಚಳುವಳಿಯ ಮುಂಚೂಣಿಯಲ್ಲಿ ನಿಂತರು. ಬೆಳಗಾಂವಕ್ಕೆ ಹೋಗಿ ಅಲ್ಲಿಯ ಡಿ. ಸಿ. ಯವರ ಮುಂದೆ ತಮ್ಮ ಚಳುವಳಿಯ ಅಹವಾಲನ್ನು ಸಲ್ಲಿಸಿದರು.

ಅತಿಥಿ ಕಲಾವಿದರಾಗಿ

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳ ಜನಪದ ಕಲಾ ತರಬೇತಿ ಯೋಜನೆಯ ಅಂಗವಾಗಿ ಸುಕ್ರಿಯವರು ಅನೇಕ ಬಾರಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಒಂದೆರಡು ವಾರ ಉಳಿದು ವಿದ್ಯಾಥಿಗಳಿಗೆ ಸುಗ್ಗಿಕುಣಿತ ಮತ್ತು ಗುಮಟೆ ಕಲಾ ತರಬೇತಿ ನೀಡಿದ್ದಾರೆ. ಹಾಲಪ್ಪ ಸಾತು ಗವಡ, ಗೋವಿಂದ ವೆಂಕ ಗೌಡ, ಪೊಕ್ಕಾ ಗಿರಿಯಾ ಗೌಡ, ನಾಗಪ್ಪ ಸಣಕೂಸ ಗೌಡ ಇವರು ಸಹಾಯಕರಾಗಿ ಇವರ ಜೊತೆ ಕೆಲಸ ಮಾಡಿದ್ದಾರೆ.

ನೆನೆಕೆ

ಸುಕ್ರಿ ಕಾಡಿನ ಹೂವಿನಂತೆ ತನ್ನೂರು ಕೇರಿಯಲ್ಲಿ ಅರಳಿ ಕೊಂಡಿದ್ದರು. ಸುಕ್ರಿಯು ದಾಯಾದಿ ಅಣ್ಣನ ಹೆಂಡತಿ ಶೀವಿ ಆಗಿನ ದೊಡ್ಡ ಹಾಡುಗಾರ್ತಿಯಾಗಿದ್ದರು. ಇವರು ಸಂಕೋಚ ಸ್ವಭಾದವರು. ಇವರು ಊರ ಗೌಡನ ಹೆಂಡತಿ ಊರಿನ ಹೊರಗೆ ಹೋಗಿ ಕಾರ್ಯಕ್ರಮ ಮಾಡಲು ಸಿದ್ಧರಿರಲಿಲ್ಲ. ಆಗ ಸುಕ್ರಿ ತನ್ನ ಜೊತೆಗಾರರ ತಂಡ ಕಟ್ಟಿಕೊಂಡು ಬೇರೆ ಊರುಗಳಿಗೂ ಹೋಗಲು ಧೈರ್ಯ ಮಾಡಿದರು. ಇವರನ್ನು ಜಾನಪದ ಜಗತ್ತಿಗೆ ಮೊದಲು ಪರಿಚಯಿಸಿ ದವರು ಇವರ ಊರಿನವರಾದ ಗೋವಿಂದ ಮಹಾಲೆ. ಇವರು ಆಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದರು. ಸುಕ್ರಿಯವರ ತಾರ್ಲೆ ತಂಡವನ್ನು ರಾಜ್ಯ ಹಾಗೂ ರಾಜ್ಯದ

ಹೊರಗೆ ದೆಲ್ಲಿ, ಕೇರಳ, ಚೆನ್ನೈ ಮುಂತಾದ ಕಡೆ ಪರಿಚಯಿಸಿದರು. ಸ್ವತಃ ಇವರನ್ನು ಆಯಾ ಸ್ಥಳಕ್ಕೆ ಕರೆದೊಯ್ದರು. ಇವರ ಈ ಸಹಕಾರವನ್ನು ಸುಕ್ರಿ ಆತ್ಮೀಯವಾಗಿ ನೆನೆಯುತ್ತಾರೆ. ಆಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಕರೀಂಖಾನ, ನಾಡೋಜ ನಾಗೇಗೌಡರು ಇವರಿಂದ ಹಾಡುಗಳನ್ನು ಸಂಗ್ರಹಿಸಿದ್ದಲ್ಲದೆ ಅನೇಕ ಬಾರಿ ಅಕಾಡಮಿಗೆ; ಪರಿಷತ್ತಿಗೆ ಕರೆಸಿಕೊಂಡು ಗೌರವಿಸಿದ್ದಾರೆ. ಆಗ ಅಕಾಡಮಿಯ ರಿಜಿಸ್ಟ್ರಾರರಾಗಿದ್ದ ಡಾ. ಹಿ. ಚಿ. ಬೋರಲಿಂಗಯ್ಯನವರು ಸುಕ್ರಿಯವರ ಬಳಿಯಿದ್ದ ಜನಪದ ಸಾಹಿತ್ಯ ಸಂಗ್ರಹ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಈ ಬುಡಕಟ್ಟು ಕಲಾವಿದೆಯನ್ನು ಜಾನಪದ ಜಗತ್ತಿನ ಸಂಬಂಧಪಟ್ಟ ಸಂಘ ಸಂಸ್ಥೆಗಳಿಗೆ ಸರಕಾರಕ್ಕೆ ಸಾಂದರ್ಭಿಕವಾಗಿ ಪರಿಚಯಿಸಿದ್ದಾರೆ. ಸುಕ್ರಿ ತನಗೊಂದು ಮನೆ ಕಟ್ಟಿಕೊಳ್ಳಲು ಮನಸ್ಸು ಮಾಡಿದಾಗ ಡಾ. ಶ್ರೀಪಾದ ಶೆಟ್ಟಿಯವರು ಮಾರ್ಗದರ್ಶನ ಮಾಡಿದ್ದಾರೆ. ಇವರನ್ನು ಸುಕ್ರಿ ಶ್ರದ್ಧೆಯಿಂದ ನೆನೆಯುತ್ತಾರೆ. ಬೊಮ್ಮಗೌಡರು ಸುಕ್ರಿಯ ಸಾಮಾಜಿಕ ಮತ್ತು ಜಾನಪದ ಚಟುವಟಿಕೆಗಳನ್ನು ವಿರೋಧಿಸುತ್ತಿರಲಿಲ್ಲ. ಆದರೆ ಹೆಂಡತಿ ದೂರದ ಊರಿನಲ್ಲಿ ದಾರಿ ತಪ್ಪಬಹುದೆಂದು ಆತಂಕಗೊಳ್ಳುತ್ತಿದ್ದರು. ಗೋವಿಂದ ಮಹಾಲೆಯವರ ಮನೆಗೆ ಹೋಗಿ ಯೋಗಕ್ಷೇಮ ವಿಚಾರಿಸುತ್ತಿದ್ದರು. ಗಂಡ ಅಲ್ಲಿ 'ನಾನು ಮತ್ತು ನಮ್ಮ ತಂಡ' 'ಸುರಕ್ಷಿತವಾಗಿರುವ ಸುದ್ದಿ ತಿಳಿದು ಸಮಾಧಾನ ಪಟ್ಟುಕೊಳ್ಳುತ್ತಿದ್ದರು ಎನ್ನುತ್ತಾರೆ ಸುಕ್ರಿ.

ಸನ್ಮಾನ ಪ್ರಶಸ್ತಿಗಳು

ಇವರನ್ನು ನಾಡಿನ ಬಹುದೊಡ್ಡ ಪ್ರಶಸ್ತಿಗಳು ಅರಸಿಕೊಂಡು ಬಂದವು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ 1989, ರಾಜ್ಯೋತ್ಸವ ಪ್ರಶಸ್ತಿ 1998, ಜಾನಪದ ಶ್ರೀ ಪ್ರಶಸ್ತಿ, 1999 ಸುಕ್ರಿಯ ಮುಡಿಗೇರಿದವು. ರಾಜ್ಯಮಟ್ಟದ ಸಂಘ ಸಂಸ್ಥೆಗಳಲ್ಲದೆ ನಾಡಿನ ಜಿಲ್ಲೆಯ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳು ಸುಕ್ರಿಯನ್ನು ಸನ್ಮಾನಿಸಿ ಗೌರವಿಸಿವೆ. ಇವರಿಗೆ 30ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಸನ್ಮಾನ, ಸಹ್ಯಾದ್ರಿ ಕನ್ನಡ

ಸಂಘದ ಅಡಿಗ ಪ್ರಶಸ್ತಿ, (2003) ಮಾಧವ ಪ್ರಶಸ್ತಿ, (2003) ಸಂದೇಶ ಪ್ರಶಸ್ತಿ, (2004) ಜಾನಪದ ಪ್ರಕಾಶನ ಪ್ರಶಸ್ತಿ, (1999) ರಾಜ್ಯವಲಯದ ಅರಣ್ಯಾಧಿಕಾರರ ಸಂಘ, ಆಲೋಚನ ವೇದಿಕೆ (1999), ಆಳ್ವಾಸ್ ನುಡಿಸಿರಿ ಪ್ರಶಸ್ತಿ 2009 ಮುಂತಾಗಿ ದೊರೆತ ಸನ್ಮಾನ ಪ್ರಶಸ್ತಿಗಳ ಸಂಖ್ಯೆ ಸುಮಾರು ಅರ್ಧಶತಕ ದಾಟಿವೆ. ನಾಡಿನ ಅತ್ಯುನ್ನತವಾದ ನಾಡೋಜ ಪ್ರಶಸ್ತಿಯು 2007ರಲ್ಲಿ ಒದಗಿ ಬಂದಾಗ, ಜಾನಪದಕ್ಕೆ ಹೊಸ ಗರಿ ಮೂಡಿತು. ನಾಡಿನ ಪತ್ರಿಕೆಗಳು ಇವರ ಹೋರಾಟ ಮತ್ತು ಸಾಧನೆಯನ್ನು ಕುರಿತು ಬರೆದವು.

ಸುಕ್ರಿಯನ್ನು ಕುರಿತು ಈ ಕಿರು ಪುಸ್ತಕ ಬರೆಯುವ ಸಂದರ್ಭದಲ್ಲಿ ಇವುಗಳಲ್ಲಿ ಕೆಲವಾದರೂ ದಾಖಲೆಗೊಳಗಾಗಲಿ ಎಂಬ ಕಾರಣದಿಂದ ಇವರ ಬಳಿ ಇದ್ದಿರಬಹುದಾದ ಪತ್ರಿಕೆಗಳನ್ನು ನೋಡಬೇಕೆಂಬ ಉದ್ದೇಶದೊಂದಿಗೆ ಸುಕ್ರಿಯ ಮನೆಗೆ ಹೋದೆ. ಆದರೆ ಸುಕ್ರಿಗೆ ಈ ಪತ್ರಿಕೆಗಳು, ಪತ್ರಿಕೆಗಳಲ್ಲಿಯ ಲೇಖನಗಳ ಅರಿವಿಲ್ಲ. ಆ ಬಗ್ಗೆ ಪರಿವೆಯೂ ಇಲ್ಲ. ತನ್ನ ಬಗ್ಗೆ ಬರೆದ ಲೇಖನಗಳನ್ನು ಸಂಗ್ರಹಿಸಬೇಕೆಂಬ ವಿಚಾರವೂ ಅವರಿಗೆ ಗೊತ್ತಿಲ್ಲ. ಅವರಿಗಾಗಿ ಇಂತಹ ಲೇಖನಗಳನ್ನು ಸಂಗ್ರಹಿಸಿ ಕೊಡುವವರೂ ಇರಲಿಲ್ಲ. ಆದ್ದರಿಂದ ಸುಕ್ರಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಅವರ ಮನೆಗೆ ಹೋದರೆ ಅವರ ಬಳಿ ಅವರನ್ನು ಕುರಿತು ಬರೆದ ಯಾವ ಪೇಪರು ತುಂಡುಗಳೂ ದೊರೆಯಲಿಲ್ಲ. ಸುಕ್ರಿಯವರನ್ನು ಕರೆದು ಅನೇಕ ಕಾರ್ಯಕ್ರಮಗಳನ್ನು ಸಂಘಟಿಸಿದ್ದವರ ಬಳಿಯೂ ಈ ಕುರಿತು ವಿವರಗಳಿಲ್ಲ. ಮದ್ಯಪಾನ ಚಳವಳಿಯಂತಹ ಸಾಮಾಜಿಕ ಕಳಕಳಿಯ ಚಳವಳಿಯಲ್ಲಿ ಇವರು ಅನೇಕ ಬಾರಿ ಭಾಗವಹಿಸಿ ಇದರ ಹೆಚ್ಚಿನ ಯಶಸ್ಸಿಗೆ ಕಾರಣರಾದರು. ಆದರೆ ಈ ದಾಖಲೆಗಳನ್ನು ಸಂಘಟಿಕರು ತಮ್ಮ ವೈಯಕ್ತಿಕ ಪ್ರತಿಷ್ಠೆಗೆ ರಾಜಕೀಯ ಲಾಭಕ್ಕೆ ಬಳಸಿಕೊಂಡರು. ಇವುಗಳನ್ನು ಸುಕ್ರಿ ಕುರಿತು ಬರೆಯಬೇಕೆಂದು ಬಯಸುವವರಿಗೆ ಒದಗಿಸುವ ಮನಸ್ಸು ಮಾಡುವುದು ತಮ್ಮ ನೈತಿಕ ಜವಾಬ್ದಾರಿ ಯೆಂದು ತಿಳಿದವರು ವಿರಳ. ತಮ್ಮ ಪ್ರತಿಷ್ಠೆಗಾಗಿ ಇವುಗಳನ್ನು ಉಳಿಸಿಕೊಂಡ ಕೆಲವರು ತಿಂಗಳುಗಟ್ಟಲೆ ವರ್ಷಗಟ್ಟಲೆ ನನ್ನನ್ನು ಕಾಯಿಸಿ ಕೊನೆಗೂ ಮೊಬೈಲನ್ನು ಅದುಮಿಟ್ಟು ತಾವು ಮೌನ ತಾಳಿದರು.

ಈ ನಡುವೆ ಪ್ರಶಸ್ತಿ ಬರಹವನ್ನು ಹೊಂದಿದ್ದ ಕೆಲವು ಪ್ರಶಸ್ತಿ ಪತ್ರಿಕೆಗಳು ಸುಕ್ರಿಯವರ ಬಳಿ ನನಗೆ ದೊರೆತವು. ಇವುಗಳಲ್ಲಿ ಕೆಲವಕ್ಕೆ ಆಯಾ ಸಂಘಟಕರು ಕನ್ನಡಿ ಹಾಕಿಸಿಕೊಟ್ಟಿದ್ದರು; ಕೆಲವಕ್ಕೆ ಲ್ಯಾಮಿನೇಶನ್ ಇತ್ತು. ಇವುಗಳನ್ನು ಕಾದಿಟ್ಟುಕೊಳ್ಳಲು ಸಹಜವಾಗಿಯೇ ಇವರ ಬಳಿ ಕಪಾಟು ಕೂಡ ಇರಲಿಲ್ಲ.

ಇವರು ತನಗೆ ದೊರೆತ ಪ್ರಶಸ್ತಿಯ ಚಿಕ್ಕ ಮೊತ್ತವನ್ನು ಬಳಸಿ ತನಗೊಂದು ಚಿಕ್ಕ ಮನೆ ಕಟ್ಟಿಕೊಳ್ಳಲು ಪ್ರಯತ್ನಿಸಿದಾಗ ಮಾನ್ಯ ದೇಶಪಾಂಡೆ, ಮಾನ್ಯ ವೀರೇಂದ್ರ ಹೆಗಡೆಯವರು ಹಾಗೂ ಸ್ಥಳೀಯ ಸಂಘ ಸಂಸ್ಥೆಗಳು ಆರ್ಥಿಕ ನೆರವು ನೀಡಿದವು. 2010ರಲ್ಲಿ ಸುಕ್ರಿ ತಲೆಯ ಮೇಲೊಂದು ಸೋರದ ಸೂರೊಂದನ್ನು ಪಡೆದರು. ಸರಕಾರದ ಮಾಸಾಶನ ದೊರಕಿರುವುದು ಇವರಿಗೆ ಸಂದ ಇನ್ನೊಂದು ಗೌರವ. ಸುಕ್ರಿ ಈಗಲೂ ನಿತ್ಯ ಕೃಷಿ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ಗೋಸೇವೆ ಕೈಗೊಳ್ಳುತ್ತಾರೆ.

ಕರೆಬಂದಾಗ ಅಷ್ಟೇ ಮುತುವರ್ಜಿಯಿಂದ ನಾಡಿನ ಮತ್ತು ಸ್ಥಳೀಯ ಸಂಘ ಸಂಸ್ಥೆಗಳ ಸಮಾರಂಭಗಳಲ್ಲಿ ಉದ್ಘಾಟನೆಗೆ ನಿಲ್ಲುತ್ತಾರೆ.

ಹೆಸರಿಲ್ಲದ ಸಂಗಡಿಗರು

ಸುಕ್ರಿಯವರು ಹಾಲಕ್ಕಿ ಒಕ್ಕಲ ಮಹಿಳೆಯರ ತಾರ್ಲೆ ಕುಣಿತ ಪ್ರದರ್ಶನಕ್ಕೆ ಅವರ ಜನಪದ ಗೀತೆ ಹಾಡುವುದಕ್ಕೆ ಹೊರಟಾಗ, ಅವರು ಹೊರಟ ನೂರಾರು ಕಡೆಯಲ್ಲೆಲ್ಲ ಪ್ರತಿ ಬಾರಿ, ಬಡಗೇರಿಯ ಸುಮಾರು ಹತ್ತರಿಂದ ಹದಿನೈದು ಮಹಿಳೆಯರ ಗುಂಪು ಸುಕ್ರಿಯವರನ್ನು ನೆರಳಿನಂತೆ ಹಿಂಬಾಲಿಸುತ್ತಿತ್ತು. ಆದರೆ ಈ ನೆರಳುಗಳ ಹೆಸರು ಎಲ್ಲಿಯೂ ದಾಖಲಾಗಿಲ್ಲ. ಅವರ ಬಳಿ ಈ ಬಗ್ಗೆ ಪ್ರಮಾಣ ಪತ್ರದ ಒಂದು ಕಾಗದ ಚೂರು ಇಲ್ಲ. ಈ ಗುಂಪು ಕುಣಿತದ ಸದಸ್ಯರಾದ ಪಾರ್ವತಿ ಹೊಸಬು ಗೌಡ. ದೇವಿ ತೋಕು ಗೌಡ, ಸುಮಿತ್ರಾ ಸುರೇಶ ಗೌಡ, ನುಗ್ಗಿ ಗಣೇಶ ಗೌಡ, ಸಣ್ಣು ಲಿಂಗಾ ಗೌಡ, ಕುಚಲಿ ಮಾಣಿ ಗೌಡ, ನೀಲಮ್ಮ ಬೇಡು ಗೌಡ, ಸುಶೀಲ ಬೀರ ತಂದೆ ಸುಕ್ರು ಗೌಡ, ಗೌರಿ ಅನಂತ ಗೌಡ, ಸೋಮಿ ಮಂಗು ಗೌಡ, ನಾಗಮ್ಮ ಸುಕ್ರು ಗೌಡ, ಕೊಯ್ದು

ಮನೆ ತಾಯಿ ಗಂಗೆ ಸಣ್ಣು ಬುದ್ದು ಗೌಡ, ಲಲಿತ ಬೀಮ ಗೌಡ, ಸೋಮು ಸೋಮು ಗೌಡ, ಆಯಿ ಕರಿಯಾ ಗೌಡ, ಚೋಮಿ ಹನಮಾಗೌಡ ಈ ಮುಂತಾದವರು ಸುಮಾರು ಕಾಲು ಶತಮಾನದಿಂದ ತಮ್ಮ ಗದ್ದೆಯ ಕೆಲಸ, ಕೂಲಿ ಕೆಲಸ ಬದಿಗಿಟ್ಟು ಮಕ್ಕಳನ್ನು ಹಿರಿಯರ ಬಳಿ ಬಿಟ್ಟು ಗಂಡನಿಂದ ಬಯ್ಯಿಸಿಕೊಂಡು ಸುಕ್ರಿಯವರ ಜೊತೆ ನಮ್ಮ ರಾಜ್ಯವಷ್ಟೇ ಅಲ್ಲ ನಮ್ಮ ರಾಷ್ಟ್ರದ ಹಲವು ರಾಜ್ಯಗಳಿಗೆ ಹೋಗಿ ನೆಲದ ಕಲೆಯ ಉತ್ಥಾನಕ್ಕೆ ಶ್ರಮಿಸಿದರು. ಸುಕ್ರಿಯವರ ಜೊತೆ ಹೆಗಲಿಗೆ ಹೆಗಲು ಕೊಟ್ಟು ಇವರ ಜೊತೆ ಸಾಕ್ಷರತಾ ಆಂದೋಲನ, ಸಾರಾಯಿ ನಿಷೇಧ ಆಂದೋಲನ, ಉಳುವವನೇ ಒಡೆಯ ಆಂದೋಲನ, ಜಾತಿಯನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಬೇಕೆಂಬ ಒತ್ತಾಯ ಇತ್ಯಾದಿ ಹಲವಾರು ಚಳವಳಿಗಳಲ್ಲಿ ಭಾಗವಹಿಸಿದರು. ದಿಲ್ಲಿ, ಕೇರಳ, ಕನ್ಯಾಕುಮಾರಿ, ಬೆಂಗಳೂರು, ಮೈಸೂರು, ಬೆಳಗಾಂವ ಮುಂತಾದ ನೂರಾರು ಕಡೆ ಹೋಗಿ ಬಡಗೇರಿಯ ಮೂಲೆಯಲ್ಲಿ ಅಡಗಿದ್ದ ಹಾಲಕ್ಕಿ ಒಕ್ಕಲ ಜನಪದ ಕಲೆ ಸಾಹಿತ್ಯಗಳ ಪ್ರಚಾರಕ್ಕೆ, ಅಭಿವೃದ್ಧಿಗೆ ಪ್ರಯತ್ನಪಟ್ಟರು.

ತಮ್ಮ ತಂಡದ ನಾಯಕಿ ಸುಕ್ರಿ ಗೌಡತಿಗೆ ನೂರಾರು ಕಡೆ ಸನ್ಮಾನಗಳಾದಾಗ ವೇದಿಕೆಯ ಕೆಳಬದಿಯಲ್ಲಿ ನಿಂತು ಅದನ್ನು ವೀಕ್ಷಿಸಿದರು, ಆನಂದಿಸಿದರು. ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ ಪ್ರಶಸ್ತಿ ಹಾಗೂ ಸಾಧನೆಗಾಗಿ ನಾಡೋಜ ಪ್ರಶಸ್ತಿಗಳು ಬಂದಾಗ ಸಂತೋಷ ಪಟ್ಟರು. ಆದರೆ ಯಾವುದೇ ಒಂದು ಸಂಘಟನೆಯೂ ಇವರ ಹೆಸರನ್ನು ಎಲ್ಲಿಯೂ ದಾಖಲಿಸಲಿಲ್ಲ. ಇವರ ಹೆಸರಿನಲ್ಲಿ ಒಂದು ಚೂರು ಕಾಗದದ ಪ್ರಮಾಣ ಪತ್ರವನ್ನು ನೀಡಲಿಲ್ಲ. ಇವರು ದಿಲ್ಲಿಯಿಂದ ಕೇರಳ ಕನ್ಯಾಕುಮಾರಿಯವರೆಗೆ ಕುಣಿದು ಹಾಡಿ ಬಂದಿದ್ದೇನೆ ಎನ್ನುತ್ತಾರೆ. ಮದ್ರಾಸಿನಲ್ಲಿ ಹನ್ನೊಂದು ದಿನ ಉಳಿದು ಬಂದಿದ್ದೇವೆ ಎನ್ನುತ್ತಾರೆ. ಇದು ನಿಜ. ಆದರೆ ಇದು ಯಾವ ಕಾರ್ಯಕ್ರಮ ? ಯಾರು ಸಂಘಟಿಸಿದರು ? ಇದರ ಬಗ್ಗೆ ಇವರ ಬಳಿ ದಾಖಲೆ ಇಲ್ಲ. ತಾವು ತಾರ್ಲೆ ಕಲಾವಿದೆಯರು, ಹಾಡುಗಾರ್ತಿಯರು ಎಂದು ಹೇಳಲು ಯಾವ ಆಧಾರವೂ ಇವರ ಬಳಿ ಉಳಿದಿಲ್ಲ. ಏಕೆಂದರೆ

ಆಯಾ ಕಾರ್ಯಕ್ರಮದ ಸಂಘಟಕರು ಇವರನ್ನು ಸುಕ್ರಿ ಮತ್ತು ಸಂಗಡಿಗರು ಎಂಬ ಹೆಸರಿನಲ್ಲಿ ಗುರುತಿಸಿದರು. ತಂಡದ ಮುಖ್ಯಸ್ಥರಿಗಷ್ಟೇ ಪ್ರಮಾಣ ಪತ್ರ ಸಂದಿತು. ಸಂಘಟಕರು ಉಳಿದ ಕಲಾವಿದರಿಗೆ ನೀಡಬೇಕಾದ ಪ್ರಮಾಣ ಪತ್ರಗಳ ಕಾಗದದ ಖರ್ಚನ್ನು ಉಳಿಸಿಕೊಂಡರು. ಸರಕಾರ ಸಂಘ ಸಂಸ್ಥೆಗಳು ಇನ್ನು ಮುಂದಾದರೂ ಇಂಥವರಿಗೆ ಅಂದರೆ ತಂಡದ ಆಯಾ ಕಲಾವಿದರಿಗೆ ಅವರವರ ಹೆಸರಿನಲ್ಲಿಯೂ ಒಂದು ತುಂಡು ಕಾಗದವನ್ನು ನೀಡಲು ಸಾಧ್ಯವಾಗಲಾರದೆ? ಸಾಧ್ಯವಾಗಲಿ. ಎಂದು ಈ ಸಂದರ್ಭದಲ್ಲಿ ಪರಿತಾಪದಿಂದ ವಿನಂತಿಸಿಕೊಳ್ಳುತ್ತಿದ್ದೇನೆ.

ಉತ್ತರ ಕನ್ನಡ ಜಿಲ್ಲೆಯ ಶರಾವತಿ ನದಿ ಕೊಳ್ಳದಲ್ಲಿ ಅಗಾಧವಾದ ಜನಪದ ಸಾಹಿತ್ಯ ಸಂಪತ್ತು ಹುದುಗಿದೆ. ಅಂಕೋಲಾ ತಾಲ್ಲೂಕಿನ ಸಿರಕಳಿ ಗ್ರಾಮದ ಸುಕ್ರಿ ಬೊಮ್ಮಗೌಡ ಇಂತಹ ಸಂಪತ್ತಿನ ವಾರರಸುದಾರರಲ್ಲಿ ಒಬ್ಬರು.

ಬಡತನವನ್ನು ಬಗಲಿಗೇರಿಸಿಕೊಂಡು, ಹಾಡುಗಳ ಮೂಟೆ ಹೊತ್ತು ತುತ್ತಿನ ಚೀಲ ತುಂಬಿಸಿಕೊಳ್ಳಲು ಬದುಕಿನುದ್ದಕ್ಕೂ ಹೋರಾಡುತ್ತಿರುವ ಹಾಲಕ್ಕಿ ಒಕ್ಕಲು ಬುಡಕಟ್ಟು ಜನಾಂಗಕ್ಕೆ ಸೇರಿದ ಸುಕ್ರಿ, ಕನ್ನಡ ನಾಡು ಕಂಡ ಅಪರೂಪದ ಕಲಾವಿದೆ. ತಾರ್ಲೆ ಕುಣಿತ ಮತ್ತು ಹಾಡುಗಳಿಗೆ ರಾಷ್ಟ್ರೀಯ ಸ್ವರೂಪವನ್ನು ತಂದು ಕೊಟ್ಟ ಯಶಸ್ಸು ಸುಕ್ರಿಯದು. ಜಾನಪದ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ 'ಜಾನಪದ ಶ್ರೀ'ಯನ್ನು ಮುಡಿಗೇರಿಸಿಕೊಂಡಿರುವ ಸುಕ್ರಿ, ಬೊಮ್ಮಗೌಡರ ಬದುಕು-ಹೋರಾಟ ಮತ್ತು ಸಾಧನೆಗಳನ್ನು ಪ್ರಸಿದ್ಧ ಜಾನಪದ ವಿದ್ವಾಂಸರಾದ ಶ್ರೀಮತಿ ಶಾಂತಿ ನಾಯಕ ಅವರು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

-ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪
E-mail : janapadaparishath@hotmail.com
Website : janpadaloka.org